# ನೇಸರು

ತಿಂಗಳೋಲೆ

₹ 5/-

PAGES 20

JULY 2024 | Nesaru Tingalole | Vol. XLII - 07



## ಓದು-ಇಷ್ಟ, ಕಷ್ಟ, ನಿಷ್ಠ-ಈಗೆಲ್ಲಾ ಸೊಟ್ಟ

ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಅಸೋಸಿಯೇಷನ್‌ನಲ್ಲಿ – ಸಂಗೀತ ಸಂಜೆ

ಸ್ಮಿತಾ ಬೆಳ್ಳೂರ್ ಇವರು ಹಿಂದೂಸ್ಥಾನಿ ಸಂಗೀತ ಹಾಗೂ ಸೂಫಿ ಸಂಗೀತದ ಕಲಾವಿದರು. ಸಂಗೀತದ ಮತ್ತೊಂದು ಮಜಲು ಸುಗಮ ಸಂಗೀತ. ಇದರಲ್ಲೇ ಬರುವ ವಿವಿಧ ಪ್ರಕಾರಗಳು ವಚನ, ದೇವರನಾಮ, ಭಾವಗೀತೆ, ತತ್ವ ಪದಗಳು ಮುಂತಾದವು.




29/06/2024ರಂದು ಸ್ಮಿತಾ ಅವರು ಈ ಎಲ್ಲಾ ಪ್ರಕಾರಗಳನ್ನು ತಮ್ಮದೇ ಧಾಟಿಯಲ್ಲಿ ಹಾಡಿ ಅದರ ಛಾಪು ಮತ್ತು ಭಾವವನ್ನು ನಮಗೆಲ್ಲಾ ಉಣಬಡಿಸಿದ್ದಾರೆ ಎಂದರೆ ತಪ್ಪಾಗಲಾರದು. ಕಾರ್ಯಕ್ರಮವನ್ನು ಬಸವಣ್ಣನವರ ವಚನವನ್ನು ಮೋಹನ ರಾಗದಲ್ಲಿ ಹಾಡುವ ಮೂಲಕ ಪ್ರಾರಂಭಿಸಿದರು. ಮುಂದೆ ನಮ್ಮ ಕಾರ್ಯಕ್ರಮದ ಸಂಪ್ರದಾಯದಂತೆ ಶಾರದ ದೇವಿಗೆ ವಂದಿಸುತ್ತಾ ಶಿವನನ್ನು ಸ್ತುತಿಸಿದರು. ನಂತರ ದ.ರಾ ಬೇಂದ್ರೆಯವರ 'ಮುಗಿಲ ಮಾರಿಗೆ ರಾಗರತಿಯ ನಂಜಯೇರಿತ್ತೆ', ಜಿ.ಎಸ್. ಶಿವರುದ್ರಪ್ಪನವರ "ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮಣ್ಣುಗಳ ಗುಡಿಯೊಳಗೆ" ಎಂಬ ಭಾವ ಗೀತೆಗಳನ್ನು ಹಾಡಿ ಶ್ರೋತೃಗಳನ್ನು ತಮ್ಮೆಡಗೆ ಸೆಳೆದುಕೊಂಡರು.




ಮುಂದೆ ಸಾಗಿ ಪುರಂದರ ದಾಸರು, ಅಕ್ಕಮಹಾದೇವಿ, ಸಂತ ಶಿಶುನಾಳ ಶರೀಫ್‌ರ ಗೀತೆಗಳನ್ನು ಹಾಡಿದರು. ಜೊತೆ ಜೊತೆಗೆ ಶರೀಫರ ಗೀತೆಗಳ ಅರ್ಥವನ್ನು ಕೂಡಾ ವಿವರಿಸಿದರು.

ಕಾರ್ಯಕ್ರಮದಲ್ಲಿ ಸ್ಮಿತಾ ಅವರು ಸೂಫಿ ಗೀತೆಗಳನ್ನು ಕೂಡಾ ಹಾಡಿ ಶ್ರೋತೃಗಳನ್ನು ರಂಜಿಸಿದರು. ಒಟ್ಟಿನಲ್ಲಿ ಒಂದು ಸುಂದರ ಸಂಜೆಯಲ್ಲಿ ಸುಂದರ ಸಂಗೀತ ರಸಧಾರೆಯ ಅನುಭವವನ್ನು ಸ್ಮಿತಾ ಅವರು ರಸಿಕರಿಗೆ ನೀಡಿದರೆನ್ನಲು ಸಂತೋಷವಾಗುತ್ತಿದೆ.

ವರದಿ : **ಶ್ಯಾಮಲಾ ರಾಧೇಶ್**

ನೇಸರು ತಿಂಗಳೋಲೆ

ಸಂಪುಟ - 42 ಜುಲೈ- 2024 ಸಂಚಿಕೆ-7

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ಕೆ. ಕಮಲ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
- Ed.
****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ, ಮಾಟುಂಗ
ಮುಂಬಯಿ – 400 019.
☎ 24037065
Email:
mysoreassociation.mumbai@gmail.com
Website:
www.mysoreassociation.in

# ಆಸೆಗಳಿಗೆ ಕಡಿವಾಣ ಹಾಕಲು ಕಲಿಯಿರಿ

**✍ ಡಾ. ಜ್ಯೋತಿ ಸತೀಶ್**



ಬದುಕನ್ನು ಬಹಳ ಸುಲಭವಾಗಿ ಸಾಗಿಸಲು ನಮಗೆ ಸಹಾಯಮಾಡುವುದು, ನಮ್ಮ ಹಿರಿಯರ ಸಲಹೆ, ಸೂಚನೆ, ಮಾರ್ಗದರ್ಶನ. ಅವರು ಹೇಳಿದಂತೆ ನಡೆದರೆ, ನಮಗೆ ಬದುಕನ್ನು ಸಾಗಿಸಲು ಕಷ್ಟವಾಗುವುದಿಲ್ಲ. ಅದಕ್ಕೆ ಅಲ್ಲವೇ ಹೇಳುವುದು, ಮನೆಯಲ್ಲಿ ಹಿರಿಯರು ಇರಬೇಕು ಅಂತ. ಈಗಿನ ಕಾಲದಲ್ಲಿ ಕೂಡು ಕುಟುಂಬಗಳು ಮರೆಯಾಗಿ ಎಲ್ಲೆಲ್ಲೂ ವಿಭಕ್ತ ಕುಟುಂಬಗಳೇ ಕಾಣಸಿಗುವುದೇ ಹೆಚ್ಚು. 'ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕು' ಎಂದು ಹಿರಿಯರು ಹೇಳಿದ್ದಾರೆ. ಅಂದರೆ, ನಮ್ಮ ಇತಿ ಮಿತಿಗೆ ತಕ್ಕಷ್ಟೇ ಖರ್ಚ ಮಾಡಬೇಕು. ಆಕಾಶಕ್ಕೆ ಕೈ ಚಾಚಬಾರದು ಅಂತ. ಜೀವನ ಸಾಗಿಸೋಕೆ ತುಂಬ ದುಡ್ಡು ಬೇಕಾಗಿಲ್ಲ. ಆದರೆ ಇನ್ನೊಬ್ಬರನ್ನು ನೋಡಿ ಜೀವನ ಸಾಗಿಸಲು ಹೋದರೆ, ಎಷ್ಟು ದುಡ್ಡಿದ್ದರೂ ಸಾಕಾಗುವುದಿಲ್ಲ.

ನಮ್ಮ ಎಷ್ಟೋ ತಂದೆ ತಾಯಿಯಂದಿರು, ತಮ್ಮ ಹೊಟ್ಟೆ, ಬಟ್ಟೆ ಕಟ್ಟಿ, ಮಕ್ಕಳನ್ನು ಕಷ್ಟಪಟ್ಟು ಸಾಕಿರುತ್ತಾರೆ. ಅವರವರ ಕಾಲ ಮೇಲೆ ನಿಂತು, ಅವರ ಬದುಕನ್ನು ಚೆನ್ನಾಗಿ ಕಟ್ಟಿಕೊಂಡರೆ ಸಾಕು. ನಮ್ಮದು ಹೇಗೋ ಆಯ್ತು, ಅವರ ಭವಿಷ್ಯ ಚೆನ್ನಾಗಿರಬೇಕು ಅನ್ನುವ ಚಿಕ್ಕ ಆಸೆ ಅಷ್ಟೇ. ಅದರೊಂದಿಗೆ ಏನೋ ನಮ್ಮ ಕೊನೆಗಾಲದಲ್ಲಿ ಒಂದು ತುತ್ತನ್ನಾದರೂ ಹಾಕಿದರೆ ಸಾಕು ಎಂಬ ಸಣ್ಣ ಭರವಸೆಯೊಂದಿಗೆ ಮಕ್ಕಳನ್ನು ಸಾಕುತ್ತಾರೆ. ಅವರಿಗೆ ಬೇರೇನೂ ಬೇಕಾಗಿಲ್ಲ. ಆದರೆ ಇವತ್ತಿನ ಕಾಲದಲ್ಲಿ ಹೆಚ್ಚಿನ ತಂದೆ ತಾಯಂದಿರು ಅಪೇಕ್ಷೇ ಪಡುವುದೇ ಬೇರೆ. ನಮಗೆ ನಮ್ಮ ಕಾಲದಲ್ಲಿ ಸಿಗದಿದ್ದ ಐಷಾರಾಮಿ ಬದುಕು, ನಿಮ್ಮಿಂದ ನಮಗೆ ಸಿಗುವಂತಾಗಬೇಕು ಅಂತ ಮಹಾದಾಸೆಯನ್ನು ಇಟ್ಟುಕೊಂಡಿರುತ್ತಾರೆ. ಅದಕ್ಕೆ ಈವಾಗಿನ ಮಕ್ಕಳಿಗೆ ಚಿಕ್ಕಂದಿನಿಂದಲೇ ನೀನು ಡಾಕ್ಟರ್ ಅಥವಾ ಇಂಜಿನಿಯರ್ ಆಗಬೇಕು ಅಂತ ಒತ್ತಡವನ್ನು ಹೇರುತ್ತಾರೆ. ನೀನು ಒಬ್ಬ ನಿಷ್ಠಾವಂತ ಮನುಷ್ಯನಾಗಿ, ಸಮಾಜಕ್ಕೆ ಒಬ್ಬ ಮಾದರಿಯಾದ ವ್ಯಕ್ತಿಯಾಗಿ ಬದುಕಿ ತೋರಿಸಬೇಕು ಎನ್ನುವುದರತ್ತ ಯಾರ ಚಿತ್ತವೂ ಇಲ್ಲ. ಅದಕ್ಕೆ ಈಗ ಹೆಚ್ಚಿನ ಮಕ್ಕಳು ತಮ್ಮ ಉನ್ನತ ವ್ಯಾಸಂಗಕ್ಕಾಗಿರಬಹುದು ಅಥವಾ ಹೆಚ್ಚು ಸಂಪಾದನೆಯನ್ನು ಮಾಡಬೇಕು ಅನ್ನುವ ತುಡಿತವನ್ನಿಟ್ಟುಕೊಂಡು ದೂರ ದೂರ ವಿದೇಶಗಳಿಗೆ ವಲಸೆ ಹೋಗುತ್ತಾರೆ. ಒಮ್ಮೆ ಮಕ್ಕಳು ವಿದೇಶಗಳಿಗೆ ಹೋದರೆ, ಅಲ್ಲಿಯ ಜೀವನಶೈಲಿಗೆ ಮಾರು ಹೋಗಿ ಅಲ್ಲಿಯೇ ನೆಲೆಸಲು ಇಷ್ಟಪಡುತ್ತಾರೆ. ಇಲ್ಲಿ ತಂದೆ ತಾಯಿಗೆ ಅವರಿಗೆ ಇಷ್ಟಪಟ್ಟ ಐಷಾರಾಮಿ ಬದುಕೇನೋ ಸಿಕ್ಕಿತು. ಆದರೆ ಮಕ್ಕಳು ಬಳಿಯಲ್ಲಿಲ್ಲ. ಕೊನೆಗಾಲದಲ್ಲೂ ಜೊತೆಗಿರಲಿಕ್ಕೆ ಅವರಲ್ಲಿ ಸಮಯವಿಲ್ಲ. ಅಂತಹ ಬದುಕಿಗೆ ಏನು ಅರ್ಥ ಸಿಕ್ಕಿತು? ಇಷ್ಟು ಸಣ್ಣ ಹೊಟ್ಟೆಯನ್ನು ತುಂಬಿಸಲಿಕ್ಕೆ ನಮಗೆ ಎಷ್ಟು ಖರ್ಚು ಆದೀತು? ಎಲ್ಲೇ ದುಡಿದರೂ ತುಂಬಿಸುವುದು ಈ ಸಣ್ಣ ಹೊಟ್ಟೆಯನ್ನು ಅಲ್ಲವೇ? ಹಾಗಿದ್ದರೆ, ಗಂಜಿಯಾದರೂ ಪರವಾಗಿಲ್ಲ, ನೀನು ಇಲ್ಲೇ ನಮ್ಮೊಂದಿಗೆ ಇರು. ಏನೇ ಸಮಸ್ಯೆ ಬಂದರೂ ನಾವೆಲ್ಲ ಒಟ್ಟಾಗಿ ಸೇರಿ ಎದುರಿಸೋಣ ಅಂತ ಮಕ್ಕಳನ್ನು ಹುರಿದುಂಬಿಸುವಲ್ಲಿ ನಾವೆಲ್ಲ ವಿಫಲರಾಗಿದ್ದೇವೆ ಅಂತ ಅನಿಸುತ್ತದೆ.

ಮೊದಲು ಮನುಷ್ಯನ ಆಯುಷ್ಯ ನೂರು ವರ್ಷ ಅಂತ ಇರುತ್ತಿತ್ತು. ಈಗ ಒಂದು ನಲವತ್ತು ದಾಟಿದ ಮೇಲೆ ಎಷ್ಟೇ ಬದುಕಿದರೂ, ಅದು ನಮಗೆ ದೇವರು ಕೊಟ್ಟ ಬೋನಸ್ ಅಂತ ತಿಳಿದುಕೊಳ್ಳಬೇಕು. ಈವಾಗಿನ ಆಹಾರ ಪದ್ದತಿಯಿಂದಾಗಿ ಮನುಷ್ಯ ಅರವತ್ತು ವರ್ಷ ದಾಟುವುದೂ ಹೆಚ್ಚು. ಅಂತಹ ಸಂದರ್ಭದಲ್ಲಿ ಇವೆಲ್ಲ ಅತಿಯಾಸೆಗಳು ಬೇಕೇ? ನಿನ್ನೆ ಕಂಡ ಮನುಷ್ಯ ಇವತ್ತು ಇರುವುದಿಲ್ಲ. ಬದುಕು ಅಷ್ಟೊಂದು ಅನಿಶ್ಚಿತತೆಯಿಂದ ಕೂಡಿರುವಾಗ, ಇವೆಲ್ಲ ಬೇಕೇ? ಯಾರಿಗೆ ಬೇಕು ಈ ದ್ವೇಷ, ಕಪಟತನ, ಹಿಂಸೆ? ನಾವು ಬರುವಾಗಲೂ ಖಾಲಿ ಕೈ, ಹೋಗುವಾಗಲೂ ಖಾಲಿ ಕೈ. ಮತ್ತೆ ಯಾಕೆ ಈ ಹಣ, ಆಸ್ತಿ ಪಾಸ್ತಿಗಳಿಗೆ ಪ್ರಾಮುಖ್ಯತೆಯನ್ನು ಕೊಡಬೇಕು?

ಪುಟ 13 ರಲ್ಲಿ ಮುಂದುವರೆಯುವುದು....

# ನಮ್ಮ ಸಂಶೋಧನೆಗಳು, ಹವಾಮಾನ, ಕುಡಿಯುವ ನೀರು



✍ ಡಾ ಮಂಜುನಾಥ್

ನಾವು ನಮ್ಮ ಪ್ರಪಂಚದಲ್ಲಿ ಸಂಶೋಧನೆಗಳಿಂದ ನಮ್ಮ ಜನಜೀವನ ಚೆನ್ನಾಗಿ ಸಾಗುತ್ತಿದೆ ಎಂದು ನಂಬಿದ್ದೇವೆ. ಆದರೆ ದಿಟವಾಗಿ ನಮ್ಮ ಬಾಳು ಚೆನ್ನಾಗಿ ಮುಂದುವರೆಯುತ್ತಿದೆಯೇ? ನಮ್ಮ ಮುಂದಿನ ಪೀಳಿಗೆ ಚೆನ್ನಾಗಿ ಬದುಕಿ ಬಾಳುತ್ತಾರೆಯೇ ? ಎಂಬ ಪ್ರಶ್ನೆಗಳನ್ನು ನಾವು ಕೇಳಬೇಕು .

ನಾವು ಹಿಂತಿರುಗಿ ನೋಡಿದಾಗ, ೧೯ನೆಯ ಶತಮಾನದಿಂದ ನಡೆದು ಬಂದಿರುವ ಸಂಶೋಧನೆಗಳಿಂದ ನಮಗೆ ನಷ್ಟವಾಗಿದೆಯೇ ಹೊರತು ಯಾವ ಫಲವೂ ಆಗಿಲ್ಲವೆಂದೇ ಹೇಳಬೇಕು. ಯೂರೋಪಿನ ಜನತೆಗೆ ಬೇಗ ಬೇಗ ಬೇರೆಡೆಗಳಿಗೆ ಪ್ರವಾಸ ಮಾಡಬೇಕೆಂಬ ಒಂದು ಆಸೆಯಿಂದಾಗಿ, ಕುದುರೆಗಳ ಹಾಗೂ ಗಾಳಿ ತಳ್ಳುವ ಹಡಗುಗಳನ್ನು ಬಿಟ್ಟು, ವೇಗದಿಂದ ಸಾಗುವ ಗಾಡಿಗಳನ್ನು ಅಣಿಮಾಡುವ ಆಸೆಯಲ್ಲಿ ತೊಡಗಿದರು. ಇದರಿಂದಾಗಿ ಮೊದಲು, ಕಲ್ಲಿದ್ದಲಿನಿಂದ ಒಲೆಗಳನ್ನು ಉರಿಸಿ, ಅದರಿಂದ ಕಾದ ನೀರಿನ ಹಬೆಯಿಂದ ನಮ್ಮ ಗಾಡಿಗಳನ್ನು ತಳ್ಳುವ ಕೆಲಸ ಮೊದಲಾಯಿತು. ಎಲ್ಲ ರೈಲು ಬಂಡಿಗಳೂ ಒಂದು ಊರಿಂದ ಇನ್ನೊಂದೂರಿಗೆ ಗುಸ್ ಗುಸು ಗುಡುತ್ತ ಭರದಿಂದ ಮುಂದೆ ಸಾಗಿದವು. ನೆಲದಡಿಯಲ್ಲಿ ಸಿಗುವ ಎಣ್ಣೆಯ ಮೇಲೆ ಅವರ ಸಂಶೋಧನೆ ಹೆಚ್ಚಾಗಿ ನಡೆಯಿತು. ಇಂಟರ್ನಲ್ ಕಂಬಸ್ಟನ್ ಎಂಜಿನ್ ಎಂಬ ಅತ್ಯಂತ ಮಹತ್ಸಾಧನೆಯನ್ನು ನಾವು ಕಂಡು ಹಿಡಿದಿದ್ದೇವೆ, ಎಂದು ಜಂಬ ಕೊಚ್ಚಿಕೊಂಡ ಬ್ರಿಟಿಷರೆಷ್ಟೋ? ಇದರಿಂದ ಆದದ್ದೇನು ? ನಮ್ಮ ಎಲ್ಲ ಗಾಳಿಗಳೂ ಕೊಳೆಯಾದವು, ಅಷ್ಟೇ ಅಲ್ಲ, ಹೀಗೆ ಕುಡಿದ ಗಾಳಿ ಎಲ್ಲೆಲ್ಲೂ ತಿರುಗಿ ಮಳೆ ಗಾಳಿಗಳೂ ಬೇರೆಡೆಗೆ ತಿರುಗಿದವು. ಆಫ್ರಿಕಾದಲ್ಲಿ ಸಹಾರಾ, ಅರೇಬಿಯಾ, ಪರ್ಷಿಯಾ ಹಾಗೂ ಹಿಮಾಲಯದ ಉತ್ತರಕ್ಕಿರುವ ಎಲ್ಲ ದೇಶಗಳೂ ಏಕೆ ಮರಳುಗಾಡಾದವು? ಎನ್ನುವ ಪ್ರಶ್ನೆಗೆ ಇವರು ಉತ್ತರವನ್ನೇ ಹುಡುಕಲಿಲ್ಲ .

ಹೀಗೆ ನಮ್ಮ ಎಲ್ಲ ಸಂಶೋಧನೆಗಳೂ ಕೇವಲ ಶಾಖವನ್ನು ಹೆಚ್ಚು ಮಾಡುವುದಕ್ಕೇ ಸಹಾಯ ಮಾಡುತ್ತಿವೆ ಎಂದು ಕೂಡ ಅವರುಗಳು ಯೋಚಿಸಲಿಲ್ಲ. ನಾವು ನಮ್ಮ ಮನೆಯಲ್ಲಿ ಬಿಸಿಯನ್ನು ತಗ್ಗಿಸಿ ತಂಪು ಮಾಡುವುದಕ್ಕೆ ಒಂದು AC ಮಷೀನ್ ಹಾಕಿಕೊಂಡರೆ ಅದು ಪ್ರಪಂಚದಲ್ಲಿ ಇನ್ನೂ ಹೆಚ್ಚು ಬಿಸಿ ಮಾಡುವುದಕ್ಕೆ ಅಣಿಯಾಗುತ್ತದೆ ಎಂಬುದನ್ನು ಇವರು ಕಾಣಲೇ ಇಲ್ಲ .

ಈ ಕೇವಲ ಒಂದು Petroleum ಎಣ್ಣೆಯಿಂದಲೇ ನಮ್ಮ ಎಲ್ಲ ಗಾಳಿ, ನೀರು ಎಲ್ಲವೂ ಕೊಳೆಯಾಗಿ ಬಿಸಿಯಾಗಿ ನಿಂತಿವೆ. ಭಾರತ ವರ್ಷ, ವರ್ಷಭರಿತ ವಾಗಿದ್ದುದರಿಂದಲೇ ಇಷ್ಟು ಜನ ಇಲ್ಲಿಗೆ ಬಂದು ಸೇರಿದ್ದು ಎಂಬುದನ್ನು ನಾವು ಮರೆಯುತ್ತಿದ್ದೇವೆ. ಕಳೆದ ವರ್ಷ ನಮ್ಮ ದೇಶದಲ್ಲಿ ಮಳೆ ಅಡ್ಡಾದಿಡ್ಡಿಯಾಗಿ ಸುರಿಯಿತು. ಕೆಲವೆಡೆ ಮಳೆಯೇ ಇಲ್ಲ, ಇನ್ನು ಕೆಲವೆಡೆ ಕೊಚ್ಚಿ ಸುರಿದು ಎಷ್ಟೋ ಜನ ಸತ್ತರು, ಮನೆಗಳೇ ಮುಳುಗಿದವು. ಇದು ಹೀಗೆ ನಡೆದರೆ ನಮ್ಮ ಮೇಲೆ ಇದು ಯಾವ ಪರಿಣಾಮ ಬೀರಬಹುದು? ಎಲ್ಲದಕ್ಕಿಂತ ಹೆಚ್ಚಾಗಿ ಕುಡಿಯುವ ನೀರು ನಮಗೆ ದೊರೆತೀತೇ ಎನ್ನುವ ಪ್ರಶ್ನೆ ನಮ್ಮ ಮುಂದೆ ನಿಂತಿದೆ. ಈ ವರ್ಷ ನವ ದೆಹಲಿಯಲ್ಲಿ ಕುಡಿಯುವ ನೀರಿಗೆ ಜನ ಹಾತೊರೆಯುತ್ತಿದ್ದಾರೆ. ಅದೇ ಬಗೆಯಲ್ಲಿ ಮುಂಬಯಿ, ಬೆಂಗಳೂರು ಗಳಲ್ಲೂ ಕುಡಿಯುವ ನೀರು ಸಿಗದೇ ಹೋಗಬಹುದು.

ಹವಾಮಾನ ಬದಲಾವಣೆಯು ಹವಾಮಾನದ ಮಾದರಿಗಳನ್ನು ಅಡ್ಡಿಪಡಿಸುತ್ತದೆ, ಇದು ಆಗಾಗ್ಗೆ ಮತ್ತು ಹೆಚ್ಚು ತೀವ್ರವಾದ ಹವಾಮಾನ ಘಟನೆಗಳು, ಅನಿರೀಕ್ಷಿತ ನೀರಿನ ಲಭ್ಯತೆ, ನೀರಿನ ಕೊರತೆಯನ್ನು ಉಲ್ಬಣಗೊಳಿಸುವುದು ಮತ್ತು ನೀರು ಸರಬರಾಜುಗಳನ್ನು ಕಲುಷಿತಗೊಳಿಸುತ್ತದೆ. ಅಂತಹ ಪರಿಣಾಮಗಳು ಮಕ್ಕಳು ಬದುಕಲು ಅಗತ್ಯವಿರುವ ನೀರಿನ ಪ್ರಮಾಣ ಮತ್ತು ಗುಣಮಟ್ಟದ ಮೇಲೆ ತೀವ್ರವಾಗಿ ಪರಿಣಾಮ ಬೀರಬಹುದು.

ಇಂದು, ಹವಾಮಾನದಲ್ಲಿನ ಬದಲಾವಣೆಯನ್ನು ಪ್ರಾಥಮಿಕವಾಗಿ ನೀರಿನ ಬದಲಾವಣೆಯ ಮೂಲಕ ಅನುಭವಿಸಲಾಗುತ್ತದೆ. ಲಕ್ಷಾಂತರ ಮಕ್ಕಳು ಅಪಾಯದಲ್ಲಿದ್ದಾರೆ.

ಹವಾಮಾನ ವೈಪರೀತ್ಯಗಳು ಮತ್ತು ನೀರಿನ ಚಕ್ರದ ಮಾದರಿಗಳಲ್ಲಿನ ಬದಲಾವಣೆಗಳು ಸುರಕ್ಷಿತ ಕುಡಿಯುವ ನೀರನ್ನು ಉಪಯೋಗಿಸಲು ಹೆಚ್ಚು ಕಷ್ಟಕರವಾಗಿಸುತ್ತದೆ, ವಿಶೇಷವಾಗಿ ಅತ್ಯಂತ ದುರ್ಬಲ ಮಕ್ಕಳಿಗೆ.

2001 ಮತ್ತು 2018 ರ ನಡುವೆ ಸುಮಾರು 74 ಪ್ರತಿಶತ ನೈಸರ್ಗಿಕ ವಿಕೋಪಗಳು ಬರ ಮತ್ತು ಪ್ರವಾಹಗಳು ಸೇರಿದಂತೆ ನೀರಿನ ಸಂಬಂಧಿಸಿದವಾಗಿವೆ. ಅಂತಹ ಘಟನೆಗಳ ಆವರ್ತನ ಮತ್ತು ತೀವ್ರತೆಯು ಹವಾಮಾನ ಬದಲಾವಣೆಯೊಂದಿಗೆ ಮಾತ್ರ ಹೆಚ್ಚಾಗುತ್ತದೆ ಎಂದು ನಿರೀಕ್ಷಿಸಲಾಗಿದೆ.

ಸುಮಾರು 436 ಮಿಲಿಯನ್ ಮಕ್ಕಳು ಹೆಚ್ಚಿನ ಅಥವಾ ಅತಿ ಹೆಚ್ಚು ನೀರಿನ ದುರ್ಲಭತೆಯ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ, ಇದು ನೀರಿನ ಕೊರತೆ ಮತ್ತು ಕಡಿಮೆ ಮಟ್ಟದ ಕುಡಿಯುವ ನೀರಿನ ಸೇವೆಯ ಸಂಯೋಜನೆಯಾಗಿದೆ.

ವಿಪತ್ತುಗಳು ಸಂಭವಿಸಿದಾಗ, ಅವರು ಸಂಪೂರ್ಣ ನೀರಿನ ಸರಬರಾಜನ್ನು ನಾಶಪಡಿಸಬಹುದು ಅಥವಾ ಕಲುಷಿತಗೊಳಿಸಬಹುದು, ಕಾಲರಾ ಮತ್ತು ಟೈಫಾಯಿಡ್‌ನಂತಹ ರೋಗಗಳ ಅಪಾಯವನ್ನು ಹೆಚ್ಚಿಸಬಹುದು, ಇವುಗಳಿಗೆ ಮಕ್ಕಳು ವಿಶೇಷವಾಗಿ ಬಲಿಯಾಗುತ್ತಾರೆ.

ಏರುತ್ತಿರುವ ತಾಪಮಾನವು ಸಿಹಿನೀರಿನ ಮೂಲಗಳಲ್ಲಿ ಮಾರಣಾಂತಿಕ ರೋಗಕಾರಕಗಳಿಗೆ ಕಾರಣವಾಗಬಹುದು, ಜನರು ಕುಡಿಯುವ ನೀರನ್ನು ಅಪಾಯಕಾರಿಯಾಗಿಸುತ್ತದೆ.

ಕಲುಷಿತ ನೀರು ಮಕ್ಕಳ ಜೀವಕ್ಕೆ ದೊಡ್ಡ ಅಪಾಯವನ್ನುಂಟುಮಾಡುತ್ತದೆ. ನೀರು ಮತ್ತು ನೈರ್ಮಲ್ಯ ಸಂಬಂಧಿತ ಕಾಯಿಲೆಗಳು 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಸಾವಿನ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ.

ಪ್ರತಿದಿನ, 5 ವರ್ಷದೊಳಗಿನ 1000 ಮಕ್ಕಳು ಅಸಮರ್ಪಕ ನೀರು, ನೈರ್ಮಲ್ಯ ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ಕಾಯಿಲೆಗಳಿಂದ ಸಾಯುತ್ತಾರೆ, ಪ್ರತಿ ವರ್ಷ 1.4 ದಶಲಕ್ಷಕ್ಕೂ ಹೆಚ್ಚು ಜನರು ಸಾಯುತ್ತಾರೆ.

ಹವಾಮಾನ ಬದಲಾವಣೆಯು ನೀರಿನ ಒತ್ತಡವನ್ನು ಉಲ್ಬಣಗೊಳಿಸುತ್ತದೆ - ಲಭ್ಯವಿರುವ ನೀರಿನ ಸಂಪನ್ಮೂಲಗಳಿಗೆ ಒಟ್ಟು ನೀರಿನ ಬೇಡಿಕೆಯ ಅನುಪಾತ - ನೀರಿಗಾಗಿ ಹೆಚ್ಚಿದ ಸ್ಪರ್ಧೆಗೆ ಕಾರಣವಾಗುತ್ತದೆ, ಸಂಘರ್ಷವೂ ಸಹ.

2040 ರ ಹೊತ್ತಿಗೆ, 4 ರಲ್ಲಿ 1 ಮಕ್ಕಳು ಹೆಚ್ಚಿನ ನೀರಿನ ಒತ್ತಡದ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಏರುತ್ತಿರುವ ಸಮುದ್ರ ಮಟ್ಟವು ಶುದ್ಧ ನೀರು ಉಪ್ಪಾಗಲು ಕಾರಣವಾಗುತ್ತದೆ. ಲಕ್ಷಾಂತರ ಜನರು ಅವಲಂಬಿಸಿರುವ ನೀರಿನ ಸಂಪನ್ಮೂಲಗಳನ್ನು ರಾಜಿ ಮಾಡಿಕೊಳ್ಳುತ್ತಿದೆ. ಹವಾಮಾನ ಬದಲಾವಣೆ ಈಗ ನಡೆಯುತ್ತಿದೆ. ನಾವು ಕಾರ್ಯನಿರ್ವಹಿಸಬೇಕು, ಮತ್ತು ನೀರು ಪರಿಹಾರದ ಭಾಗವಾಗಿದೆ.

ಹವಾಮಾನ ಬದಲಾವಣೆಯ ನೀರಿನ ಪರಿಣಾಮಗಳಿಗೆ ನೀರು ಮತ್ತು ನೈರ್ಮಲ್ಯ ಸೇವೆಗಳನ್ನು ಅಳವಡಿಸಿಕೊಳ್ಳುವುದು ಮಕ್ಕಳ ಆರೋಗ್ಯವನ್ನು ರಕ್ಷಿಸುತ್ತದೆ ಮತ್ತು ಅವರ ಜೀವಗಳನ್ನು ಉಳಿಸುತ್ತದೆ. ಇದಲ್ಲದೆ, ನೀರನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸುವುದು ಮತ್ತು ಸೌರಶಕ್ತಿ ಚಾಲಿತ ನೀರಿನ ವ್ಯವಸ್ಥೆಗಳಿಗೆ ಪರಿವರ್ತನೆಯು ಹಸಿರುಮನೆ ಅನಿಲಗಳನ್ನು ಕಡಿಮೆ ಮಾಡುತ್ತದೆ ಮತ್ತು ಮಕ್ಕಳ ಭವಿಷ್ಯವನ್ನು ಮತ್ತಷ್ಟು ರಕ್ಷಿಸುತ್ತದೆ.

ಜಗತ್ತು ಸ್ಮಾರ್ಟ್ ಆಗಬೇಕು. ಪ್ರತಿಯೊಬ್ಬರಿಗೂ ಒಂದು ಪಾತ್ರವಿದೆ, ಮತ್ತು ನಾವು ಕಾಯಲು ಸಾಧ್ಯವಿಲ್ಲ.

# ಪ್ರವಾಸದ ಅನುಭವ ಕಥನ



✍ **ಡಾ| ಸುಮಾ ದ್ವಾರಕಾನಾಥ್**

ನಮ್ಮ ಪ್ರವಾಸದ ಇನ್ನೊಂದು ವಿಶಿಷ್ಟತೆ ನಿಮಗೆ ಹೇಳಬೇಕು. ನಾವು ಸುಮಾರು ೮೦ ಜನ ಟೀಚರ್ಸ್ ಪ್ರವಾಸ ಹೊರಡುತ್ತಿದ್ದುದರಿಂದ, ರೈಲಿನ ಒಂದು ಭೋಗಿ ಪೂರಾ ನಮ್ಮದೇ ಇರುತ್ತಿತ್ತು. ನಮ್ಮ ಶಾಲೆಯು ೭-೮ ಶಾಖೆಗಳಲ್ಲಿ ನಡೆಯುತ್ತಿದ್ದುದರಿಂದ, ಒಂದೊಂದು ಕಂಪಾರ್ಟಮೆಂಟ್ ಒಂದೊಂದು ಶಾಖೆಯ ಟೀಚರ್ಸ್ ಗೆ ಹಂಚಲಾಗಿತ್ತು. ಹಾಗಾಗಿ ಜವಾಬ್ದಾರಿಯೂ ಇರುತ್ತಿತ್ತು. ನಮ್ಮ ರಕ್ಷಣೆಗಾಗಿ ಇಬ್ಬರು ಉಪಾಧ್ಯಾಯರೂ ಇದ್ದರು. ಏಷ್ಯನ್ ಟ್ರಾವೆಲ್ಸ್ ಮೂಲಕ ಪ್ರವಾಸ ಕೈಗೊಳ್ಳುತ್ತಿದ್ದರಿಂದ, ಮ್ಯಾನೇಜರ್ ಶ್ರೀನಿವಾಸ್ ಹತ್ತಿರ ನಮ್ಮ ಆರ್ಗನೈಸರ್, ಬ್ಯಾಂಕ್ ಅಕೌಂಟ್ (ಖಾತೆ) ಓಪನ್ ಮಾಡಿಸುತ್ತಿದ್ದರು. ಪ್ರವಾಸ ಹೊರಟಾಗ, ನಾವೆಲ್ಲಾ ನಮ್ಮ ಹತ್ತಿರ ಇದ್ದ ಹಣವನ್ನು ಅವರಲ್ಲಿ ಕೊಟ್ಟಿರುತ್ತಿದ್ದೆವು. ಪ್ರತಿ ಊರಿನಲ್ಲಿಳಿದಾಗ ಅಲ್ಲಿಯ ಖರ್ಚಿಗೆ ಬೇಕಾದಷ್ಟು ನಾವು ಹಣ ಡ್ರಾ ಮಾಡಬಹುದಿತ್ತು. ಇದರಿಂದ ನಮ್ಮ ಹಣ ಜೋಪಾನ ಮಾಡುವ ಕಾಳಜಿಯೂ ನಮಗೆ ತಪ್ಪಿತ್ತು.



ಮೊದಲನೆಯ ಸಲ ದೆಹಲಿಗೆ ತಲುಪಿದೆವು. ರಾಜಧಾನಿ ತಲುಪಿದ ಸಂಭ್ರಮ. ಇತಿಹಾಸ ಪ್ರಸಿದ್ಧವಾದ ಹಳೆಯ ದೆಹಲಿಯ ೭೩ ಮೀಟರ್ ಎತ್ತರವಿರುವ ಗುಲಾಮಿ ಸಂತತಿಯವನಾದ ಕುತ್ಬುದ್ದೀನ್ ಐಬಕ್ ಕಟ್ಟಿಸಿರುವ ಕುತುಬ್ ಮೀನಾರ್, ಮುಘಲರ ವಾಸ್ತು ಶಿಲ್ಪದ ಪ್ರತೀಕವಾದ ೨೫೦ ಚಿಲ್ಲರೆ ಎಕರೆಯಲ್ಲಿ ಹರಡಿರುವ ಕೆಂಪು ಕೋಟೆ, ಮೀನಾ ಬಜಾರ್, (ಅಕ್ಬರ್ ಬಾದಶಹಾ ಸಹ ಮಹಿಳೆಯರ ಮಾರುಕಟ್ಟೆಯಾದ ಮೀನಾ ಬಜಾರ್ ಗೆ ಬುರ್ಖಾ ಧರಿಸಿ ಹೋಗುತ್ತಿದ್ದ ಸಂಗತಿ ಕೇಳಿ ಆಶ್ಚರ್ಯವಾಯಿತು.) ಒಟ್ಟಿಗೇ ೨೫,೦೦೦ ಜನರು ಪ್ರಾರ್ಥನೆ ಮಾಡಬಹುದಾದಂತ ಜುಮ್ಮಾ ಮಸೀದಿ, ಹೆಸರಾಂತ ಚಾಂದಿನಿ ಚೌಕ್, ಸಂಸದ್ ಭವನ, ಲೋಧಿ ಗಾರ್ಡನ್ಸ್, ಮೊದಲ ಜಾಗತಿಕ ಯುದ್ಧದಲ್ಲಿ ಬ್ರಿಟಿಷರಿಗಾಗಿ ಹೋರಾಡಿದ ೭೦,೦೦೦ ಭಾರತೀಯ ಸೈನಿಕರ ನೆನಪಿನಲ್ಲಿ ೧೯೩೧ ನೆಯ ಇಸವಿಯಲ್ಲಿ ಕಟ್ಟಿದ್ದ ಇಂಡಿಯಾ ಗೇಟ್, ಲೋಟಸ್ ಟೆಂಪಲ್, ಪುರಾನ ಕಿಲ್ಲಾ, ಕನಾಟ್ ಪ್ಲೇಸ್ ನಲ್ಲಿರುವ ಸೂರ್ಯನ ಗಡಿಯಾರವಿರುವ ಜಂತರ್ ಮಂತರ್, ಗಾಂಧೀಜಿಯ ಸಮಾಧಿಯಾದ ರಾಜ್ ಘಾಟ್, ಜವಹರಲಾಲ್ ನೆಹ್ರೂರವರ ಸಮಾಧಿ ಶಾಂತಿವನ, ಲಾಲ್ ಬಹಾದ್ದೂರ್ ಶಾಸ್ತ್ರಿಯವರ ಸಮಾಧಿ ವಿಜಯ ಘಾಟ್ ಮುಂತಾದುವನೆಲ್ಲಾ ನೋಡಿ ಬಂದೆವು. ನ್ಯೂ ದೆಹಲಿಯ ರಾಜಪತ್ ನಲ್ಲಿರುವ ಭಾರತದ ರಾಷ್ಟ್ರಪತಿಯ ಭವನ, ೧೫ ಎಕರೆಯಲ್ಲಿ ಹರಡಿರುವ ಅದರ ಹಿಂದಿನ ಗುಲಾಬಿ ತೋಟ, (ಮುಘಲ್ ಗಾರ್ಡನ್) ನೋಡಿ ಬಂದೆವು. ವಿಶೇಷವೇನೆಂದರೆ ನಮ್ಮ ಕರ್ನಾಟಕದವರೇ ಆದ ವರಾಹ ವೆಂಕಟಗಿರಿಯವರು ಆಗ ರಾಷ್ಟ್ರಪತಿಯಾಗಿದ್ದುದರಿಂದ ಅವರನ್ನೂ ಭೇಟಿಮಾಡಿ, ಅವರ ಸ್ವಗೃಹದಲ್ಲಿ ಒಂದು ಗ್ರೂಪ್ ಫೋಟೊ ಸಹಿತ ತೆಗೆಸಿಕೊಂಡದ್ದು ಇವತ್ತಿಗೂ ಆಲ್ಬಮ್ ನಲ್ಲಿದೆ. ಜೊತೆಗೆ ಇನ್ನೊಂದು ನಮಗೆ ಮೂಡಿದ ಗರಿಯೆಂದರೆ ಆಗ ಪ್ರಧಾನ ಮಂತ್ರಿಯಾಗಿದ್ದ ಇಂದಿರಾ ಗಾಂಧಿಯವರನ್ನು ಅವರ ಸ್ವಗೃಹದಲ್ಲಿ ಭೇಟಿ ಮಾಡಿ, ಫೋಟೊ ತೆಗೆಸಿಕೊಂಡಿದ್ದು. ಇದು ನಮ್ಮ ಕಾಲದ ಹಿರಿಮೆ ಗರಿಮೆ ಎಂದು ಇಂದಿಗೂ ಅಳಿಸಲಾಗದ ಭಾವನೆ. ನೆನಪಿನಲ್ಲಿ ಉಳಿದಿರುವಂತಹಾ ದೆಹಲಿಯ ಪ್ರೇಕ್ಷಣೀಯ ಸ್ಥಳವೆಂದರೆ (ಸುಶೀಲಾ ಬಾಯಿ) ಶಂಕರ ಅಂತರಾಷ್ಟ್ರೀಯ ಬೊಂಬೆ ಮ್ಯೂಸಿಯಮ್. ಅಲ್ಲಿ ಸುಮಾರು ೬,೫೦೦ ಬೊಂಬೆಗಳನ್ನೂ, ಬೊಂಬೆಗಳಿಗಾಗಿ ಒಂದು ಆಸ್ಪತ್ರೆಯನ್ನೂ ಪ್ರದರ್ಶನಕ್ಕಿಟ್ಟಿರುವುದು. ಇಷ್ಟೆಲ್ಲಾ ನೋಡಿ ಸಂಭ್ರಮಿಸಿದ ಮೇಲೆ ಗಾಡಿಗಾಡಿಯಲ್ಲೂ ಮಾರುತ್ತಿದ್ದ ಒಳ್ಳೆಯ ಸೇಬುಗಳಿಂದ ಆಕರ್ಷಿತರಾಗಿ ಕೊಂಡು ತಿನ್ನಲು ಹೋದರೆ, ಮನೆಯವರಿಗಿಲ್ಲವಲ್ಲಾ ಎಂದು ನೆನಪಾಗಿ ಹಣ್ಣು ಸವಿಯುವುದಕ್ಕೂ ಮನಸ್ಸು ತಡೆಯಿತು.

ಸರಿ ಮುಂದಿನ ಪಯಣ ವಿಶ್ವಪ್ರಸಿದ್ಧ ತಾಣ ಆಗ್ರಾಕ್ಕೆ. ನಾವು ತಾಜ ಮಹಲ್ ಅನ್ನು ತಲುಪಿದ್ದು, ಶರದೃತುವಿನ ಹುಣ್ಣಿಮೆ. ಅಂದು ಚಂದ್ರನ ಬೆಳದಿಂಗಳು ಭೂಮಿಯ ಮೇಲೆ ನೇರವಾಗಿ ೯೦ ಡಿಗ್ರಿಯಲ್ಲಿ ಬೀಳುವುದಂತೆ. ಅಂಥ ಅಪರೂಪದ ರಾತ್ರಿಯಲ್ಲೂ ನಮಗೆ ಅಮೃತಶಿಲೆಯಲ್ಲಿ ಕಟ್ಟಿದ ತಾಜ ಮಹಲ್ ನ ಸೌಂದರ್ಯ ಸವಿಯಲಾಗಲಿಲ್ಲ. ಹೀಗೆಂದು ನಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದಾಗ 'ಗೋರಿಗೆಂಥ ಕಳೆ ಇರೋಕೆ ಸಾಧ್ಯ '

ಎನ್ನುವ ಉತ್ತರ ನಮ್ಮ ಮಾಸ್ಟರ್ ನಿಂದ ಬಂತು. ಮುಘಲ್ ದೊರೆ ಷಹಜಹಾನ್, ಇಂಥ ಭವ್ಯವಾದ ಕಟ್ಟಡ ಕಟ್ಟಿದ ಶಿಲ್ಪಿಗಳ ಕೈ ಕತ್ತರಿಸಿದೆನೆಂದು ತಿಳಿದು ಮನಸ್ಸಿಗೆ ಇನ್ನೂ ಬೇಜಾರಾಯಿತು.

ಮಾರನೆಯ ದಿನ ಆಗ್ರಾದಿಂದ ೩೭ಕಿ.ಮೀ. ದೂರದಲ್ಲಿರುವ, ಅಕ್ಬರ್ ಚಕ್ರವರ್ತಿ ೧೬ ನೆಯ ಶತಮಾನದಲ್ಲಿ ಕಟ್ಟಿಸಿದ ಕೆಲವು ಕಾಲ ಮುಘಲ್ ರಾಜಧಾನಿಯಾಗಿದ್ದ ಫತೇಪುರ್ ಸಿಕ್ರಿ ನೋಡಲು ಹೊರೆಟೆವು. ಮೊದಲ ಸಲ ಕೋಟೆಯನ್ನು ನೋಡುತ್ತಿದ್ದುದರಿಂದ ಅವರ ವಾಸ್ತು ಶಿಲ್ಪ ಮತ್ತು ರಕ್ಷಣಾ ವ್ಯವಸ್ಥೆಗೆ ಬೆರಗಾಗಿದ್ದೆವು.

ಮೊದಲು ಎದುರಾಗುವುದೇ ಬುಲಂದ್ ದರ್ವಾಜಾ. ಅದರ ವಿಶೇಷವೇನೆಂದರೆ (draw bridge) ರಾತ್ರಿ ಮುಚ್ಚಿದರೆ ಬಾಗಿಲು, ಬೆಳಗ್ಗೆ ತೆಗೆದಾಗ ಸೇತುವೆ. ಒಳಗೆ ಹೋದರೆ ಪಾಂಚ್ ಮಹಲ್. ಸುಮಾರು ೧೪೬ ಕಂಭಗಳಿದ್ದೂ ಒಂದೂ ರಾಜನ ದರ್ಬಾರ್ ಗೆ ಅಡ್ಡಿಯಾಗದಂತೆ ನಿರ್ಮಿಸಿರುವುದು. ದಿವಾನೆ ಆಮ್, ದಿವಾನೆ ಖಾಸ್, ಶೀರ್ಷ್ ಮಹಲ್, ರಾಣಿಯರ ಸ್ನಾನದ ಕೊಳ, ಮಗ ಔರಂಗಜೇಬ, ತಂದೆ ಷಹಜಹಾನ್ ನನ್ನು, ಅವನ ಕೊನೆಯ ದಿನಗಳಲ್ಲಿ ತಾಜ ಮಹಲ್ ನೋಡುತ್ತಾ ಸಾಯುವಂತೆ ಕಟ್ಟಿಸಿದ ಮಹಲ್, ಬೀರಬಲ್ಲನ ಮನೆ, ಮುಂತಾದುವನೆಲ್ಲಾ ಬೆರಗುಗಣ್ಣುಗಳಿಂದ ನೋಡಿ ಬಂದೆವು. ಯಾವ ಆಧುನಿಕ ಸಲಕರಣೆಗಳಿಲ್ಲದೆ, ಬೇಸಿಗೆ ಮತ್ತು ಚಳಿಗಾಲಗಳನ್ನು ಕಳೆಯುವ ಅವರ ಸುವ್ಯವಸ್ಥೆ ಕಂಡು ನಮಗೆ ಅಚ್ಚರಿಯಾಯಿತು. ಗೋಡೆಗಳ ನಡುವೆ ಒಂದು ಇಟ್ಟಿಗೆಯಷ್ಟು ಟೊಳ್ಳಾದ ಜಾಗ ಬಿಟ್ಟಿದ್ದು, ಬೇಸಿಗೆಯಲ್ಲಿ ತಣ್ಣನೆಯ ನೀರು ಮತ್ತು ಚಳಿಗಾಲದಲ್ಲಿ ಬಿಸಿ ನೀರು ಹಾಯಿಸುವ ವ್ಯವಸ್ಥೆ, ಅಂದಿನ ವಾಸ್ತು ತಜ್ಞರ ಪ್ರಜ್ಞೆಗೆ ಸಾಕ್ಷಿಯಾಗಿತ್ತು. ಇಂಥ ಪೂರ್ವ ನಿಯೋಜಿತ ನಗರವನ್ನು ನೋಡಿದ ಖುಷಿ ನಮ್ಮದಾಗಿತ್ತು.



ಆಗ್ರಾದಲ್ಲಿರುವ ಮತ್ತೊಂದು ವೈಶಿಷ್ಟ್ಯವೆಂದರೆ ದಯಾಲ್ ಬಾಗ್ ನಲ್ಲಿರುವ ರಾಧಾಕೃಷ್ಣಸ್ವಾಮಿ ದೇವಸ್ಥಾನ. ಅದನ್ನು ೧೯೧೫ ನೆಯ ಇಸವಿ ಜನವರಿಯಿಂದ ಕಟ್ಟಲು ಶುರು ಮಾಡಿದ್ದರೂ, ಅದು ಪೂರ್ಣಗೊಳ್ಳಲು

ಸುಮಾರು ೧೧೩ ವರ್ಷದ ದಿನ ಬೇಕಾಯಿತು. ನಾವೂ ಅಪೂರ್ಣದೇವಾಲಯವನ್ನೇ ನೋಡಿ ಬಂದಿದ್ದೆವು.

ಹೀಗೆ ಸುಮಾರು ಎರಡು ಮೂರು ಸಲ ದೆಹಲಿಯ ಹಾದಿಯಲ್ಲೇ ಉತ್ತರ ಭಾರತದ ಪ್ರವಾಸ ಸಾಗಿತ್ತು. ಮುಂದೆ ನಾವು ಸಿಕ್ಖರ ಯಾತ್ರಾಸ್ಥಳ ಅಮೃತಸರಕ್ಕೆ ಪ್ರಯಾಣ ಬೆಳೆಸಿದೆವು. ಅಲ್ಲಿಯ ಸ್ವರ್ಣ ಮಂದಿರಕ್ಕೆ ಹೋಗಲು ಎಲ್ಲರೂ ತಲೆಯ ಮೇಲೆ ವಸ್ತ್ರ ಹಾಕಿಕೊಂಡು ಹೋಗಬೇಕಾಗಿತ್ತು. ಗುರುದ್ವಾರದಲ್ಲಿರುವ ಗ್ರಂಥಸಾಹೇಬದ ದರ್ಶನ ಪಡೆದು, ಪ್ರತಿದಿನ ಅಲ್ಲಿ ನಡೆಯುವ ಸಮಾರಾಧನೆ ಯಲ್ಲಿ ಒಂದು ಲಕ್ಷ ಜನ ಭಕ್ತರು ಪ್ರಸಾದ ಸ್ವೀಕರಿಸುವ (ಲಾಂಗರ್)ಗೆ ಹೋದೆವು. ಸಾಕಷ್ಟು ಭಕ್ತರು ತಟ್ಟೆ ತೊಳೆಯುವ ಕೆಲಸದಿಂದ, ಭಕ್ತರಿಗೆ ಊಟ ನೀಡುವ ಸೇವೆಯಲ್ಲಿ ತೊಡಗಿದ್ದರು. ಅಲ್ಲಿಯ ಮುಖ್ಯ ಪ್ರಸಾದವೆಂದರೆ ಚಪಾತಿ, ಉದ್ದಿನ ಬೇಳೆಯ ತೊವ್ವೆ, ಅನ್ನ, ಹುಳಿ ಮತ್ತು ಶಿರಾ. ಸ್ವರ್ಣ ಮಂದಿರದಿಂದ ಹೊರಬರುವಾಗ ಬಾಗಿಲಲ್ಲಿ ನೀಡುವ ಗುಲಪಾವಟೆ ಪ್ರಸಾದ ಬಾಯಿಗೆ ಹಾಕಿದ ತಕ್ಷಣ ಕರಗಿ ಹೋಗುತ್ತಿತ್ತು. ನಮಗೆಲ್ಲಾ ಇನ್ನೊಂದು ಸಲ ಪ್ರಸಾದ ತಿನ್ನುವ ಮನಸ್ಸಿತ್ತು, ಆದರೆ ಅವರ ಕಟ್ಟು ನಿಟ್ಟಾದ ಶಿಸ್ತಿನಿಂದ ನಮಗೆ ನಿರಾಸೆಯಾಯಿತು. ಸ್ವರ್ಣ ದೇವಾಲಯದ ಮುಂದಿನ ಕೊಳದ ಮುಂದೆ ನಮ್ಮ ಫೋಟೊ ಸಂಭ್ರಮ ನಡೆಸಿ ಹೊರಗೆ ಬಂದೆವು.

ಸ್ವಾತಂತ್ರ ಕಾಲದಲ್ಲಿ ನಡೆದ ಭೀಕರ ಕೊಲೆಗೆ ಸಾಕ್ಷಿಯಾದ ಜಲಿಯನ್ ವಾಲಾ ಬಾಗ್ ಗೆ ಮಧ್ಯಾನ್ಹ, ನಮ್ಮ ಪ್ರಯಾಣ ಮುಂದುವರೆಯಿತು.೧೯೧೯ನೆಯ ಇಸವಿ ಏಪ್ರಿಲ್ ೧೩ ಬೈಸಾಕಿ ಹಬ್ಬದಂದು, ಸಾವಿರಾರು ಮುಗ್ಧ ಜನರ ಮೇಲೆ ನಡೆದ ಕ್ರೌರ್ಯ ಮರೆಯಲಾರದಂತಹುದು. ಆ ಮೈದಾನಕ್ಕೆ ಒಂದೇ ಒಂದು ಸಣ್ಣ ಓಣಿಯಂತಿದ್ದ ಬಾಗಿಲಿನಿಂದ ಬಂದು ಬ್ರಿಟಿಷರ ರೌಲತ್ ಆಕ್ಟ್ ವಿರುದ್ಧ ಭಾಷಣ ಕೇಳಲು ಸೇರಿದ್ದ ಜನ ಸಮೂಹಕ್ಕೆ, ಹೊರಗೆ ತಪ್ಪಿಸಿಕೊಳ್ಳಲು ಸಾಧ್ಯವಾಗದಂತೆ ಜನರಲ್ ಡೈಯರ್ ನೀಡಿದ ಆದೇಶದಿಂದ ನಮ್ಮವರೇ ನಮ್ಮ ಭಾರತೀಯರನ್ನು ಗುಂಡು ಹೊಡೆದು ಸಾಯಿಸಿರುವುದನ್ನು ದೇವರೂ ಮೆಚ್ಚಲಾರ. ಜೀವ ಉಳಿಸಿಕೊಳ್ಳಲು ಹೋಗಿ ಅಲ್ಲಿಯ ನೆಲಭಾವಿಗೆ ಬಿದ್ದವರೆಷ್ಟೋ! ಸುತ್ತಲಿನ ಗೋಡೆಯ ಮೇಲಿನ ಗುಂಡಿನ ಗುರುತುಗಳನ್ನು ನೋಡಿ ಬಿಕ್ಕಿ ಬಿಕ್ಕಿ ಅಳುವಂತಾಯ್ತು. ಆದರೆ ಅವರ ತ್ಯಾಗವೆಂದೂ ವ್ಯರ್ಥವಾಗಲಿಲ್ಲ. ಮುಂದಿನ ಸ್ವಾತಂತ್ರ್ಯ ಹೋರಾಟಕ್ಕೆ ನಾಂದಿಯಾದದ್ದಂತೂ ಸತ್ಯ.

ಮುಂದಿನ ಕಂತಿನಲ್ಲಿ ಕಾಶ್ಮೀರ ಹಾಗೂ ಬದರಿ ಪ್ರಯಾಣದ ಅನುಭವ ಹಂಚಿಕೊಳ್ಳುತ್ತೇನೆ.

ಕಳೆದ ಸಂಚಿಕೆಯಿಂದ

# ಬೆತ್ತಲೆ

(ಉಮಾ ರಾವ್ ಕಥೆಗಳು)

✍ **ಉಮಾ ರಾವ್**



"ಹಬ್ಬ ಹತ್ತಿರ ಬಂತಲ್ಲೋ? ತುಂಬಾ ಗಲಾಟೆ ಇರಬೇಕು ದುಕಾನಿನಲ್ಲಿ..." ಚಹಾ ಮಾಡುತ್ತಲೇ ಆಯಿ ಕೇಳಿದಳು. "ಪಾಪ, ನಿಂತೂ ನಿಂತೂ ಎಷ್ಟು ಕಾಲು ನೋಯುತ್ತೆ..."

"ಹೂಂ ದೀಪಾವಳಿ ರಶ್ ಗೊತ್ತಲ್ಲಾ... ಜನಾನೋ ಜನ. ಕಾಜೋಲ್ ಸ್ಟೈಲ್, ರಾಣಿ ಮುಖರ್ಜಿ ಸ್ಟೈಲ್, ಕರಿಷ್ಮಾ ಸ್ಟೈಲ್... ಎಲ್ಲಕ್ಕೂ ಡಿಮ್ಯಾಂಡೋ ಡಿಮ್ಯಾಂಡು... ಅದಕ್ಕೆ ಈ ಸೋಮವಾರ ರಜಾನೂ ಇಲ್ಲ..."

ಥತ್, ನಿನ್ನ ಸೇಠೂಗೆ ಎಷ್ಟು ಸಂಪಾದಿಸಿದರೂ ಸಾಲದು. ಮೈಮುರಿದುಕೊಂಡು ದುಡಿಯೋರು ನೀವು ತಾನೇ. ಸದ್ಯ ಓವರ್‌ಟೈಮ್, ಬೋನಸ್ ಏನಾದ್ರೂ ಕೊಡ್ತಾನೋ... • ಹುಶಾರಾಗಿರು ದಿಲೀಪ ಸೇಲ್ಸ್‌ಮನ್ ಕೆಲಸ ತುಸು ಜವಾಬ್ದಾರೀದು. ಗಲಾಟೇಲಿ ಏನಾದರೂ ಹೆಚ್ಚು ಕಡಿಮೆ ಆದರೆ ನಿನ್ನ ತಲೇಗೇ ಬರುತ್ತೆ... "ಹುಶಾರಾಗೇ ಇದ್ದೀನಿ... ಚಹಾ ಕೊಡು ಮೊದಲು.

"ನನ್ನನ್ನೂ ಒಂದು ದಿನ ಕರ್ಕೊಂಡ್ ಹೋಗೋ ನಿನ್ನ ಅಂಗಡಿಗೆ, ನಿನ್ನ ಕೆಲಸ ನೋಡಿ ಸಂತೋಷಪಡ್ತೀನಿ... ಎಷ್ಟು ದಿನದಿಂದ ಇವತ್ತು ನಾಳೆ ಅಂತಾನೇ ಇದೀಯಾ"..

ದಿಲೀಪ ಮಾತಾಡದೆ ಚಹಾ ಕಪ್ ತುಟಿಗೆ ತಗೊಂಡು ಹೋದ.

"ಒಂದಷ್ಟು ಹೊಸ ಚಾಯ್ ಕಪ್ಪುಗಳನ್ನು ತರಬೇಕು. ಒಂದಕ್ಕೂ ಹಿಡಿ ಇಲ್ಲ" * ಮೊದಲಬಾರಿ ಗಮನಿಸಿದವನಂತೆ.

ದೂರ, ಬಿಸಿಲು. ಟೈಮಿಲ್ಲ. ರೈಲಲ್ಲಿ ನೂಕುನುಗ್ಗಲು. ಸೇಠ್ ಗೆ ಮನೆಯವರು ಬರೋದು ಇಷ್ಟ ಇಲ್ಲ. ಎಷ್ಟು ದಿನಾಂತ ಏನೇನು ಹೇಳಿ ಆಯಿಯಿಂದ ನುಣುಚಿಕೊಳ್ಳುವುದು?

ಗಟ್ಟೂನ ಕಂಡರೆ ಅಥವಾ ಬೇರೆ ಹುಡುಗರ ಕಂಡರೆ ನಾಚಿದಂತೆ ಅಂಗಡಿ ಹುಡುಗಿಯರು ಇವನೊಡನೆ ಮಾತಾಡುವಾಗ ನಾಚುತ್ತಿರಲಿಲ್ಲ. ಸಾಮಾನ್ಯವಾಗಿ ಹುಡುಗರಲ್ಲಿ ತೋಡಿಕೊಳ್ಳದ ವಿಷಯವನ್ನು ಸಂಕೋಚವಿಲ್ಲದೆ ಇವನ ಹತ್ತಿರ ಹೇಳುತ್ತಿದ್ದರು.

"ಈಗ ಬಾತ್ ರೂಮಿಗೆ ಹೋಗಿ ಬತ್ತೇನೆ. ಈ ಹ್ಯಾಂಡ್ ಬ್ಯಾಗ್ ಇಲ್ಲಿಟ್ಟಿರಲಾ?"

"ನನ್ನ ಲಿಪ್‌ಸ್ಟಿಕ್ ಹರಡಿಲ್ಲ ತಾನೇ ನೋಡು"

"ಪೀರಿಯಡ್ ಡೇಸ್ ಗೊತ್ತಾ ದಿಲೀಪ... ಅದಕ್ಕೇ ನಿಲ್ಲೋದೇ ಕಷ್ಟವಾಗ್ತಿದೆ."

"ನಮ್ಮ ಸೇಠೂಗೆ ಮೂರು ಹೆಂಡತಿಯರು ಗೊತ್ತಾ... ಆದರೆ ಅವರು ದಿನಾ ಚಿಕ್ಕವಳ ಜೊತೇನೇ ಮಲಗೋದು..."

ಒಂದು ದಿನವಂತೂ ಇವನು ಗುಟ್ಟಾಗಿ ಆಕರ್ಷಿತನಾಗಿದ್ದ ಸೀಮಾ ಬಳಕುತ್ತಾ ಬಂದು, ಕೆಂಪಾಗಿ, ಮೆಲುದನಿಯಲ್ಲಿ, "ದಿಲೀಪ್, ಯಾರಿಗೂ ಗೊತ್ತಾಗದ ಹಾಗೆ ಶೇಖರ್‌ಗೆ ಈ ಲೆಟರ್ ಕೊಡ್ತೀಯಾ" ಎಂದು ಉಸುರಿ, ಜೇಬಿನಲ್ಲಿ ಆ ಕಾಗದ ತುರುಕಿ ಓಡಿದಾಗ ಇವನಿಗೆ ತುಂಬಾ ಬೇಸರವೇ ಆಗಿತ್ತು. ಅವರೆಲ್ಲಾ ಅಷ್ಟು ನಿರಾಳವಾಗಿ ತನ್ನೊಡನೆ ಮಾತಾಡಬೇಕಾದರೆ ಅವರಿಗೆ ತನ್ನ ಬಗ್ಗೆ ಏನನ್ನಿಸುತ್ತಿರಬಹುದು. ತಾನೇನು ಗಂಡಸಲ್ವೇ, ಅವರೇಕೆ ಸ್ವಲ್ಪವೂ ಸಂಕೋಚಪಟ್ಟುಕೊಳ್ಳುವುದಿಲ್ಲ ಎಂದು ಮನಸ್ಸಿಗೆ ಒಂದು ಮುಜುಗರವೂ ಆಗಿತ್ತು.

******

ಗಟ್ಟೂ ಮಾಡುತ್ತಿದ್ದ ಚೇಷ್ಟೆಗಳು, ಅನ್ನುತ್ತಿದ್ದ ನಗೆಚಾಟಿಕೆಗಳು ದಿಲೀಪನಿಗೆ ಕೊಂಚವೂ ಹಿಡಿಸುತ್ತಿರಲಿಲ್ಲ. ಅಂದೂ ಅಷ್ಟೇ. ಹೊಸದಾಗಿ ಬಂದಿದ್ದ ಕೆಂಪು ಸಲ್ವಾರ್ ಕಮೀಜನ್ನು ಮಾಧುರಿಗೆ ತೊಡಿಸಿ ಇನ್ನೇನು ದುಪಟ್ಟಾಗೆ ನಾಜೂಕಾಗಿ ಪಿನ್ನು ಹಾಕಬೇಕು, ದೊಪ್ಪನೆ ಹಿಂದಿನಿಂದ ಬೆನ್ನಮೇಲೆ ಏಟು. ದುಪಟ್ಟಾ ಕೈಯಿಂದ ಜಾರಿತು. ನಿರಿಗೆಗಳೆಲ್ಲಾ ಕಲಸಿಹೋದವು. ಹಿಂದೇ ಗಟ್ಟು ನಿಂತಿದ್ದ.

"ಏನೋ, ನಿನ್ನ ಪರ್ಮನೆಂಟ್ ದುಲ್ಹನ್‌ಗೆ ಎಷ್ಟು ಅಲಂಕಾರ ಮಾಡಿದ್ರೂ ಸಾಲದು..." ಕಣ್ಣು ಹೊಡೆದ.

"ನೋಡು, ಕೆಲ್ಸ ಮಾಡ್ತಿರೋದು ಕಾಣಲಿಲ್ವಾ. ತಿರುಗಾ ಮೊದ್ಲಿಂದ ಶುರು ಮಾಡ ಬೇಕು" ದಿಲೀಪ್ ಕಿಡಿ ಕಾರಿದ.

"ನಿಂಗೇನು ಬೇಸರ ಇಲ್ವಲ್ಲಾ... ಅವಳ ಜೊತೆ ಎಷ್ಟು ಹೊತ್ತು ಕಳೆದರೂ ನಿಂಗೆ ಸಾಲದೂ..."

ದಿಲೀಪನ ತುಟಿ ನಡುಗತೊಡಗಿತು.

ಆಗಲೇ ಒಳಗೆ ಬಂದ ಸೇಠು "ಬೇಗ ಬೇಗ ಡ್ರೆಸ್ ಮಾಡು. ಏನು ಹರಟೆ ಹೊಡೀತಾ ನಿಂತಿದೀಯಾ" ಎಂದು ದಿಲೀಪನತ್ತ ತಿರುಗಿ ರೇಗಿದಾಗ, ಗಟ್ಟು "ಸೇಠ್ ಜೀ, ನಾನು ಅದೇ ಹೇಳ್ತಿದ್ದೆ ಇವನಿಗೆ..." ಎಂದು ದನಿ ಸೇರಿಸಿ ಅಲ್ಲಿಂದ ಕಾಲ್ತೆಗೆದ.

"ದಿಲೀಪ, ಹಬ್ಬ ಹತ್ತಿರ ಬಂದ್ರೂ ನಿನ್ನಂಗಡಿ ತೋರಿಸಲೇ ಇಲ್ವಲ್ಲೋ...

ಎಲ್ಲಿ ಆಯಿ, ನೀನೇ ನೋಡ್ತಿದೀಯಾ, ನಂಗೆ ಪುರುಸತ್ತಿದ್ರೆ ತಾನೇ... ಅಲ್ಲಿ ಬಂದು ನೀನೇನು ಮಾಡ್ತೀ... ಅದೂ ಎಲ್ಲಾ ಬಟ್ಟೆ ಅಂಗಡಿ ಹಂಗೆ ಒಂದು..."

"ನೋಡು, ನೀನು ಕೆಲಸ ಮಾಡೋ ಜಾಗ ಅಂದೇಲೆ ಒಂದ್ಸಲ ಕಣ್ಣಾರೆ ನೋಡೋಣಾಂತ... ಮೊನ್ನೆ ಲಕ್ಷ್ಮೀಬಾಯಿ ಅಂತಿದ್ಲು. ನಾವಿಬ್ರೇ ಒಂದಿನ ಹೋಗೋಣ ಬಾ. ನಂಗೆ ಗಿರ್‌ಗಾಮ್ ಚೆನ್ನಾಗಿ ಗೊತ್ತೂಂತ..."

"ಸದ್ಯ ಹಾಗೇನಾದರೂ ಮಾಡಿಬಿಡಬೇಡ. ಅಲ್ಲಿ ತುಂಬಾ ನೂಕುನುಗ್ಗಲು. ಇನ್ನು ಬಿದ್ದು ಎದ್ದು ಮಾಡಿಕೊಳ್ಳಿ ಅಷ್ಟೆ. ಒಂದಿನ ನಾನೇ ನಿನ್ನನ್ನು ಟ್ಯಾಕ್ಸಿ ಮಾಡ್ಕೊಂಡು ಕರ್ಕೊಂಡು ಹೋಗ್ತಿನಿ... ಸರೀನಾ... ಈಗ ಚಹಾ ಕೊಡ್ತೀಯಾ ಒಂದು ಕಪ್ಪು..." ಆಯಿಗೆ ಟ್ಯಾಕ್ಸಿ ಶಬ್ದ ಕೇಳಿಯೇ ಖುಶಿಯಾಯಿತು. ತನ್ನ ಮಗ ಟ್ಯಾಕ್ಸೀಲಿ ಆಯೀನ ಸುತ್ತಿಸೋ ಅಷ್ಟು ದೊಡ್ಡವನಾಗಿಬಿಟ್ಟ. ಸದ್ಯ. ಅವನು ಬಾಬಾನ ಹಾಗಾಗಲಿಲ್ಲ.

'ಇನ್ನೇನು ದೀಪಾವಳಿಗೆ ಎರಡು ದಿನವಿತ್ತು. ಗಟ್ಟು ಬಂದವನೇ ಉತ್ಸಾಹದಿಂದ ಎಲ್ಲರಿಗೂ ಎಷ್ಟೆಷ್ಟು ಬೋನಸ್ ಎಂದು ಈಗ ತಾನೇ ಸೇಠು ಲೆಕ್ಕಹಾಕಿ ಕವರ್‌ಗಳಲ್ಲಿ ತುಂಬಿಸಿಟ್ಟ ಸುದ್ದಿ ಹೇಳಿದ. ಎಲ್ಲರೂ ಕುತೂಹಲದಿಂದ ಅವನನ್ನು ಸುತ್ತುವರಿದರು. ಕೊನೆಗೆ ಸಂಕೋಚದಿಂದ ದೂರವೇ ಇದ್ದ ದಿಲೀಪನ ಕಡೆಗೆ ಗಟ್ಟು ತಿರುಗಿ, ನಿಂಗೆ ಮುಂದಿನ ವರ್ಷಾನೇ, ನೀನು ಸೇರಿ ಇನ್ನೂ ಮೂರು ತಿಂಗಳಾಗಿದೆಯಲ್ಲಾ..." ಎಂದ.

ದಿಲೀಪ "ಆದ್ರೆ.. ಜೆನ್ನೀನೂ ನನ್ನ ಜೊತೇನೇ ಸೇರಿದವಳಲ್ಲ... ಅವಳಿಗೆ ಫುಲ್ ಬೋನಸ್ ಅಂತಿದ್ದೇ" ಎಂದಾಗ, ಗಟ್ಟೂ "ಅವಳ ವಿಷಯಾನೇ ಬೇರೆ, ಅವಳು ಸೇಲ್ಸ್ ಗರ್ಲ್" ಎಂದವನೇ ಅಲ್ಲಿಂದ ನಡೆದ.

ದಿಲೀಪನಿಗೆ ಏಕೋ ತುಂಬಾ ಕಿರಿಕಿರಿ ಹತ್ತಿತು. ಆಯಿಯ ಎದುರಿಗೆ ಬೇರೆ ಕೊಚ್ಚಿಕೊಂಡಿದ್ದ. ಅಷ್ಟು ಹೊತ್ತಿಗೇ ಬೊಂಬೆಗಳು ಧರಿಸಿದ ಉಡುಪುಗಳೇ ಬೇಕೆಂದು ಗಿರಾಕಿಯೊಬ್ಬರು ಪಟ್ಟು ಹಿಡಿದಿದ್ದರಿಂದ, ಮರಳಿ ನೆಲಮಾಳಿಗೆಗೆ ಬಂದ. ಕಾಜೋಲ್, ಮಾಧುರಿ, ಹೆಲೆನ್ ಬೆತ್ತಲಾಗಿ ಮತ್ತೆ ಅಲಂಕಾರಕ್ಕೆ ತಯಾರಾಗಿ ನಿಂತಿದ್ದರು.

"ಬೇಗ ಬೇಗ ತಯಾರು ಮಾಡು. ಶೋ ವಿಂಡೋ ಬಿಕೋ ಅನ್ನುತ್ತ ಅಂತ ಸೇಠು ನಾರಾಜ್ ಆಗಿದಾರೆ..." ಮೇಲಿಂದ ಧೋಂಡ್ಯಾನ ಕೂಗು.

ಮೊದಲು ಹೆಲೆನ್‌ಳನ್ನು ಸ್ಟೂಲಿನ ಮೇಲೆ ಕೂಡಿಸಿ ಕಪ್ಪು ಬ್ರಾ ತೊಡಿಸಿದ. ಇನ್ನೇನು ಹುಕ್ ಹಾಕಬೇಕು "ನೋಡು ದಿಲೀಪ್, ಯಾರು ಬಂದಿದಾರೆ ನಿನ್ನನ್ನ ನೋಡೋಕೆ" ಕಿಶನ್ ಕಾಕಾ ಚಹಾ ತಂದವನೇ ಉತ್ಸಾಹದಿಂದ ಕೂಗಿದ.

ಮೆಟ್ಟಿಲ ಮೇಲೆ ಆಯಿ, ಲಕ್ಷ್ಮೀಬಾಯಿ ನಿಂತಿದ್ದರು. ದಿಲೀಪನ ಕೈ ಹಾಗೇ ಉಳಿಯಿತು. ಪಕ್ಕದಲ್ಲಿದ್ದ ಕಾಜೋಲ್, ಮಾಧುರಿಯರಂತೆ ಅವನೂ ಕಲ್ಲಾದ.

"ನೋಡ್ಯಾ ದಿಲೀಪ ನಾನೇ ಬಂದ್ಬಿಟ್ಟೆ ನಿನ್ನ ಅಂಗಡೀಗೆ..."

ಬಿಸಿಲಿಂದ ಬಂದ ಆಯಿಯ ದೃಷ್ಟಿ ಒಳಗೆ ಹೊಂದಿಕೊಳ್ಳಲು ಒಂದೆರಡು ಕ್ಷಣ ಬೇಕಾಯಿತು. ಹಾಗೇ ಎಲ್ಲಾ ಸ್ಪಷ್ಟವಾದಂತೆ ಅವಳ ಮುಖ ಕಪ್ಪಿಟ್ಟಿತು.

ಒಂದೇ ನಿಮಿಷ ಅಲ್ಲಿ ನಿಂತವಳೇ, ತಿರುಗಿ ಮೆಟ್ಟಿಲು ಧಡಧಡ ಹತ್ತತೊಡಗಿದಳು.

ಲಕ್ಷ್ಮೀಬಾಯಿ ಗಲಿಬಿಲಿಗೊಂಡು, "ಅದ್ಯಾಕೆ ಹಂಗೆ ಹೊರಟುಬಿಟ್ಟೆ, ಪಾಪ ಹುಡುಗನ್ನ ಮಾತಾಡಿಸಿಕೊಂಡು ಹೋಗೋಣ" ಎಂದದ್ದನ್ನೂ ಕಿವಿ ಮೇಲೆ ಹಾಕಿಕೊಳ್ಳಲಿಲ್ಲ. ದಿಲೀಪ ಅಲ್ಲಿಂದ ಕದಲಲಿಲ್ಲ.

ದಿಲೀಪನಿಗೆ ವಿಚಿತ್ರ ಸಂಕಟ ಪ್ರಾರಂಭವಾಯಿತು. ಕೆಲಸ ಹಾಗೇ ಬಿಟ್ಟು ಅಂಗಡಿ ಯಿಂದ ಹೊರಬಂದ. ಪಕ್ಕದ ಚಾ ದುಕಾನಿಗೆ ಹೋಗಿ ಅರ್ಧ ಗಂಟೆ ಕೂತ.

"ಇದೇನೋ ಕೆಲಸದ ಮಧ್ಯೆ ಬಂದೆ. ತಲೆನೋವೇನೂ..." ಎಂದ ಅಂಗಡಿಯವನಿಗೂ ಉತ್ತರ ಕೊಡಲಿಲ್ಲ.

ಮತ್ತೆ ನಿಧಾನವಾಗಿ ಎದ್ದು ಒಳಗೆ ಬಂದು ನೆಲಮಾಳಿಗೆಯ ಮೆಟ್ಟಿಲುಗಳನ್ನು ಇಳಿಯತೊಡಗಿದ. ಒಳಗಿಂದ ಕೇಕೆ, ನಗು ಕೇಳಿ ಬಂದು ಯಾರ್ಯಾರಿರಬಹುದೆಂದು ಕೊಳ್ಳುತ್ತಿರುವಾಗಲೇ, ಅಲ್ಲಿ ಗಟ್ಟು, ಜೆನ್ನಿ ಕಣ್ಣಿಗೆ ಬಿದ್ದರು.

ಗಟ್ಟು ಕಾಜೋಲ್ ಕಡೆ ಕೈ ತೋರಿಸಿ ಹೊಟ್ಟೆ ಹಿಡಿದು ನಗುತ್ತಿದ್ದ. ಜೆನ್ನಿ "ಗಟ್ಟೂ ಕ್ಯಾಬದ್‌ಮಾಶ್ ಹೈರೇ ತೂ" ಎಂದು ಕೇಕೆ ಹಾಕುತ್ತಿದ್ದಳು.

ಕಾಜೋಲ್ ಇಬ್ಬರ ನಡುವೆ ನಿಂತಿದ್ದಳು. ಅವಳ ನಡುಭಾಗ ಮಾತ್ರ ಅವಳದಾಗಿರಲಿಲ್ಲ. ಗುಲಾಬಿ ಬಣ್ಣದ ಮಾಧುರಿಯದು. ಅದನ್ನೂ ಹಿಂದು ಮುಂದಾಗಿ ಜೋಡಿಸಿದ್ದ ಗಟ್ಟು.

ದಿಲೀಪನನ್ನು ನೋಡಿದ ಗಟ್ಟು ಸ್ವಲ್ಪ ಬೆಚ್ಚಿದರೂ ತೋರಗೊಡದೆ, ಏನೂ ಆಗದಂತೆ ನಟಿಸುತ್ತಾ, ದೇಖೋ ದಿಲೀಪ್, ಈಗ ನಿನ್ನ ಡಾರ್ಲಿಂಗ್ ಟೂ-ಇನ್-ಒನ್" ಎಂದು ಮತ್ತೆ ನಗತೊಡಗಿದ.

ಒಂದು ಕ್ಷಣ ಈ ದೃಶ್ಯ ದಿಟ್ಟಿಸಿ ನೋಡಿದ ದಿಲೀಪನ ತಲೆಯೊಳಗೆ ಏನೋ ಪಟ ಪಟನೆ ಹೊಡೆಯತೊಡಗಿತು. ಗಟ್ಟುವಿನತ್ತ ಹೋದವನೇ ಅವನ ಕಾಲರ್ ಹಿಡಿದು ಕೆಳಕ್ಕೆ ಕೆಡವಿದ. ಜೆನ್ನಿ ಹೆದರಿ ಚೀರಿದಳು. ಗಟ್ಟುವನ್ನು ಕೆಳಗೆ ಹಾಕಿಕೊಂಡು ದಿಲೀಪ ದೈತ್ಯಶಕ್ತಿಯಿಂದ ತದಕತೊಡಗಿದ. ಗಲಾಟೆಯಲ್ಲಿ ಪಕ್ಕದಲ್ಲೇ ಬಿದ್ದ ಹೆಲೆನ್‌ಳನ್ನು ಎತ್ತಿ ಅವನ ತಲೆ ಮೇಲೆ ಅಪ್ಪಳಿಸಿದ. ಗಟ್ಟೂ ಈ ಹೊಡೆತಕ್ಕೆ ತತ್ತರಿಸಿ, ಎಚ್ಚರ ತಪ್ಪಿದ. ಶಬ್ದ ಕೇಳಿ ಜನ ಸೇರಿದರು. ದಿಲೀಪನೂ ಸುಸ್ತಾಗಿ ನೆಲದ ಮೇಲೆ ಕುಸಿದಿದ್ದ. ಒಳಗೆ ಬಂದ ಸೇಠು ಒಂದು ಕ್ಷಣ ಎಲ್ಲಾ ನೋಡಿದ್ದೇ "ಈಗಲೇ ಇಲ್ಲಿಂದ ತೊಲಗು. ಮತ್ತೆ ನಿನ್ನ ದರಿದ್ರ ಮುಖ ತೋರಿಸಬೇಡ" ಎಂದು ಗುಡುಗಿದ. ಅಂದು ದಿಲೀಪ ಮನೆಗೆ ಮರಳಲಿಲ್ಲ.

# ಆಳು ಹಾಗೂ ಆಳ್ವಿಕೆ

ನೇಸರು - ವಿಚಾರ

ಆಳು , ಇಂಗ್ಲಿಷ್ ನಲ್ಲಿ MAN ಎಂದು. ಆಳ್ವಿಕೆ , ಎಂದರೆ MANAGEMNET ಎಂದು. ಒಂದು ಹೊಲದಲ್ಲೂ ಆಳು , ಆಳ್ವಿಕೆ ಇದ್ದೇ ಇರುತ್ತದೆ . ಅಂತೆಯೇ ನಾಡಿನಲ್ಲೂ ಆಳು ಮತ್ತು ಆಳುವವರೂ ಇರುತ್ತಾರೆ. ಇವರಿಬ್ಬರ ನಡುವಿನ ನೆಂಟು ಎಂತಿರಬೇಕು ಅನ್ನುವುದನ್ನು ತಿಳಿಯದಿದ್ದರೆ , ಆ ಆಳ್ವಿಕೆ ಹಾಳಾಗುತ್ತದೆ

ಮ್ಯಾನೇಜರ್ ಹೇಗೆ ನಿರ್ವಹಿಸಬೇಕೆಂದು ಮರೆತುಬಿಡುತ್ತಾನೆ. ಕ್ರಿಸ್ ಐಲರ್ಸ್ ಅವರಿಂದ ಮ್ಯಾನೇಜ್ಮೆಂಟ್ ಎನ್ನುವುದು ಒಂದು ನಿರ್ದಿಷ್ಟ ಗುರಿಯತ್ತ ಮಾನವ ತಂಡವನ್ನು ಮುನ್ನಡೆಸುವುದಾಗಿದೆ, ಇದರಿಂದಾಗಿ ಎಲ್ಲಾ ತಂಡವು ಸಂತೋಷದಿಂದ ಮತ್ತು ತೃಪ್ತವಾಗಿರುತ್ತದೆ. MANAGEMENT ಪದವು ಅದರ ಆರಂಭದಲ್ಲಿ MAN ಅನ್ನು ಹೊಂದಿದೆ ಎಂಬುದನ್ನು ಮರೆಯಬೇಡಿ ಪರಿಣಾಮಕಾರಿ ನಿರ್ವಹಣೆಯು ತಾಳ್ಮೆ, ಶ್ರದ್ದೆ ಮತ್ತು ದಯೆಯನ್ನು ಬಯಸುತ್ತದೆ. ಸಮಸ್ಯೆ-ಪರಿಹರಿಸುವುದು ಯಾವುದೇ ವ್ಯವಸ್ಥಾಪಕ ಪಾತ್ರದ ನಿರ್ಣಾಯಕ ಅಂಶವಾಗಿದೆ, ಆದ್ದರಿಂದ ಸವಾಲಿನ ಸಂದರ್ಭಗಳಲ್ಲಿ ಉದ್ಯೋಗಿಗಳಿಗೆ ಸಹಾಯ ಮಾಡುವಲ್ಲಿ ಸೃಜನಶೀಲ ಚಿಂತನೆಯು ಮೌಲ್ಯಯುತವಾಗಿದೆ. ನಮ್ಮಲ್ಲಿ ಹೆಚ್ಚಿನವರು ನಮ್ಮ ವೃತ್ತಿಜೀವನದಲ್ಲಿ ಕೆಲವು ಹಂತದಲ್ಲಿ ವ್ಯವಸ್ಥಾಪಕರನ್ನು ಹೊಂದಿದ್ದೇವೆ. ಕೆಲವರು ಸಹಾಯಕಾರಿ, ಸಹಾನುಭೂತಿ ಮತ್ತು ಸಮರ್ಥರಾಗಿದ್ದರೆ, ಇತರರು ಈ ಮಾನದಂಡಗಳನ್ನು ಪೂರೈಸದಿರಬಹುದು. ಸವಾಲಿನ ವ್ಯವಸ್ಥಾಪಕರೊಂದಿಗೆ ವ್ಯವಹರಿಸುವುದು ಒಂದು ಸವಾಲಾಗಿದೆ. ನಿರ್ವಾಹಕರಾಗಿರುವುದು ನಿರ್ವಿವಾದವಾಗಿ ಬೇಡಿಕೆಯಿದೆ, ಮತ್ತು ಒಬ್ಬರು ಒತ್ತಡವನ್ನು ನಿಭಾಯಿಸಲು ಸಾಧ್ಯವಾಗದಿದ್ದರೆ, ಅಂತಹ ಪ್ರಚಾರವನ್ನು ಮರುಪರಿಶೀಲಿಸುವುದು ಬುದ್ಧಿವಂತವಾಗಿದೆ. ನೀವು ಮ್ಯಾನೇಜರ್-ಸಂಬಂಧಿತ ತೊಂದರೆಗಳನ್ನು ಅನುಭವಿಸದಿದ್ದರೆ, ಈ ವಿಷಯವನ್ನು ಚರ್ಚಿಸಲು ನಮ್ಮೊಂದಿಗೆ ಸೇರಿಕೊಳ್ಳಿ.

**ಕೆಲಸವೇ ಜೀವನ:** ಅನೇಕ ವ್ಯಕ್ತಿಗಳಿಗೆ, ಕೆಲಸವು ಧನಾತ್ಮಕ ಮತ್ತು ಆನಂದದಾಯಕ ಅನುಭವವಾಗಿರುತ್ತದೆ. ಆದಾಗ್ಯೂ, ವಿವಿಧ ಕಾರ್ಯಸ್ಥಳದ ಅಂಶಗಳು ಕೆಲವೊಮ್ಮೆ ಕಚೇರಿಯಲ್ಲಿ ತಮ್ಮ ಸಮಯವನ್ನು ಎದುರು ನೋಡುವುದರಿಂದ ಉದ್ಯೋಗಿಗಳನ್ನು ತಡೆಯಬಹುದು. ಪೈಜಾಮಾದಿಂದ ಹೊರಬರಲು ಮತ್ತು ಕೆಲಸದ ಉಡುಪಿಗೆ ಹೊಂದುವ ಸರಳ ಕ್ರಿಯೆಯು ಕೆಲಸ ಮಾಡಲು ಹೋಗುವಲ್ಲಿ ಉತ್ಸಾಹವನ್ನು ಕಡಿಮೆ ಮಾಡಲು ಸಾಕು.

ನಿರ್ವಾಹಕರು ಸಹ ತಮ್ಮ ಪೈಜಾಮಾದಲ್ಲಿ ಉಳಿಯುವ ಬಯಕೆಯನ್ನು ಹಂಚಿಕೊಳ್ಳಬಹುದು. ಅವರು ತಮ್ಮ ಉದ್ಯೋಗಿಗಳ ಮೇಲೆ ಹೆಚ್ಚುವರಿ ಜವಾಬ್ದಾರಿಗಳನ್ನು ಹೊಂದಿದ್ದರೂ, ಈ ನಿರ್ದಿಷ್ಟ ವ್ಯವಸ್ಥಾಪಕರ ಮೇಲೆ ನಿರೀಕ್ಷೆಗಳು ಬೇಡಿಕೆಯಿರುವಂತೆ ತೋರುತ್ತದೆ. ಯಾರಾದರೂ ರಜೆಯಲ್ಲಿರುವುದಕ್ಕಿಂತ ಹೆಚ್ಚಾಗಿ ಕೆಲಸದಲ್ಲಿರಲು ಏಕೆ ಬಯಸುತ್ತಾರೆ ಅಥವಾ ಅವರು ಅಗತ್ಯವಿಲ್ಲದಿದ್ದಾಗ ಬೇಗನೆ ಬರಲು ಆಯ್ಕೆ ಮಾಡಬಹುದು ಎಂಬ ಪ್ರಶ್ನೆಗಳನ್ನು ಇದು ಹುಟ್ಟುಹಾಕುತ್ತದೆ. ಬಹುಶಃ ಈ ಮ್ಯಾನೇಜರ್‌ಗೆ ರಿಯಾಲಿಟಿ ಚೆಕ್ ಆಗಿದೆ.

ನಾನು ನಿಮ್ಮ ಕಣ್ಣುಗಳಲ್ಲಿ ನೋಡುವುದನ್ನು ನಿಲ್ಲಿಸಲು ಸಾಧ್ಯವಿಲ್ಲ. ಯಾವುದೇ ಕೆಲಸದ ಸ್ಥಳದಲ್ಲಿ, ಉತ್ಸಾಹವನ್ನು ಹೆಚ್ಚಿಸುವ ಮತ್ತು ಕಚೇರಿಗೆ ಸ್ವಲ್ಪ ನಗು ತರಿಸುವ ವ್ಯಕ್ತಿಗಳನ್ನು ಹೊಂದಿರುವುದು ಅತ್ಯಗತ್ಯ, ಅದು ಕೆಲವೊಮ್ಮೆ ಕಿರಿಕಿರಿಯುಂಟುಮಾಡಬಹುದು. ಆಗೊಮ್ಮೆ ಈಗೊಮ್ಮೆ ನಗುವಿನ ಸದ್ದಿಲ್ಲದೇ ಕಛೇರಿ ಡಲ್ ಆಗಬಹುದು. ಆದಾಗ್ಯೂ, ಆಫೀಸ್ ಕ್ಲೌನ್ ಆಗಲು ಬಯಸುವವರಿಗೆ, ಆ ಪಾತ್ರದಲ್ಲಿ ಯಶಸ್ವಿಯಾಗಲು ಅನಾಮಧೇಯತೆಯನ್ನು ಕಾಪಾಡಿಕೊಳ್ಳುವುದು ಅಗತ್ಯವಾಗಬಹುದು.

ನಿಮ್ಮ ಡೆಪ್ಯೂಟಿ ಅಥವಾ ಆಫೀಸ್ ಪ್ಯೂನ್ ಆಗಿರಲಿ, ತಂಡದ ಪ್ರತಿಯೊಬ್ಬರೊಂದಿಗೂ ನೀವು ಸಂಬಂಧವನ್ನು ಬೆಳೆಸಿಕೊಳ್ಳಬೇಕು. ಅವುಗಳಲ್ಲಿ ಪ್ರತಿಯೊಂದೂ ನಿಮ್ಮ ಕಡೆಗೆ ನೋಡುತ್ತವೆ. ಅವರು ಅಲ್ಲಿದ್ದಾರೆ ಏಕೆಂದರೆ ಅವರು ಬದುಕ ಬೇಕು ಅಥವಾ ಅವರ ಜೀವನವನ್ನು ಮತ್ತಷ್ಟು ನಿರ್ಮಿಸಬೇಕು. ನೀವು ಸಂಸ್ಥೆಯನ್ನು ತೊರೆದ ನಂತರವೂ ಈ ಸಂಬಂಧಗಳು ಮುಂದುವರಿಯುತ್ತವೆ. ಅವರು ನಿಮ್ಮನ್ನು ಶಾಶ್ವತವಾಗಿ ನೆನಪಿಸಿಕೊಳ್ಳುತ್ತಾರೆ.



## ಭೂಮಿಯಂತೆ; ಅಪ್ಪ-ಅಮ್ಮ

✍ **ಕುಂದೂರು ಅಶೋಕ್.**

ಅಪ್ಪ ಭೂಗೋಳ ಸೇರಿದ್ದು ಈಗ ಇತಿಹಾಸ
ನನಗೋ ಅಪ್ಪ; ಆಕಾಶ. ಅವ್ವ; ಭೂಮಿ
ನಾ ನಡುವೆ ಹಾರಾಡುವ ಬಲೂನು
ಇಬ್ಬರನ್ನೂ ತುಂಬಾ ಪ್ರೀತಿಸುತ್ತೇನೆ.
ಮರೆಯದೇ; ಭೂಮಿಯನ್ನೂ ಅಷ್ಟೇ..,

ಅಪ್ಪನ ಬೆವರು ಉಪ್ಪಾಗಿ ಸುರಿದು
ಗದ್ದೆ-ಹೊಲವನ್ನು ಹಸನು ಮಾಡಿದ್ದು
ಪೈರು-ಪಚ್ಚೆ ಹುಲುಸಾಗಿ ಬೆಳದದ್ದು
ನಮ್ಮ ಹೊಟ್ಟೆಯ ತುಂಬಿಸಲೆಂದೇ!

ಅವ್ವ ಕಳೆಯ ಕಿತ್ತದ್ದು
ಹರಿವೆ ಸೊಪ್ಪು, ಕಡ್ಡಾಣಿಗೆ ಸೊಪ್ಪನ್ನು ಆರಿಸಿ
ಉಪ್ಪು ಹಾಕಿ, ಒಗ್ಗರಣೆ ನೀಡಿದ್ದು, ರಾಗಿ ರೊಟ್ಟಿಯ
ಮುರಿದು ಬಾಯಲ್ಲಿ ಕರಗಿಸಿದ್ದು, ರಟ್ಟೆಗೆ
ಶಕ್ತಿ ತುಂಬಿಸಿಕೊಳ್ಳಲು!!

ಭೂಮಿಯಷ್ಟೇ ಅಪ್ಪನನ್ನೂ
ತುಂಬಾ ಪ್ರೀತಿಸುತ್ತೇನೆ. ಏಕೆಂದರೆ;
ವಾರದ ಸಂತೆಗೆ ಹೋದ ಅಪ್ಪ
ಕೈಚೀಲದ ತುಂಬಾ ತರಕಾರಿ, ಕಾಯಿ-ಪಲ್ಯೇ
ಅದರ ಮೇಲಷ್ಟು ಮಾಂಸದ ಮುದ್ದೆ
ಸಾಲದ್ದಕ್ಕೆ ಪುರಿ-ಕಾರ-ಬೋಂಡಾ ತಂದದ್ದಕ್ಕಾಗಿ

ಅಪ್ಪ ಬಸ್ಸಿಳಿದು ಹರದಾರಿ ನಡೆದು
ಊರ ಬಾಗಿಲಿಗೆ ಪ್ರವೇಶ. ನಮಗೋ
ಎಲ್ಲಿಲ್ಲದ ಆವೇಶ ಅಪ್ಪನ ಕೈಚೀಲ
ನಮ್ಮ ಹೆಗಲ ಮೇಲೆ! ಮೆರವಣಿಗೆಯೊಂದಿಗೆ
ಅಪ್ಪನನ್ನು ಮನೆಗೆ ಕರೆತರುವ ಸಾಹಸ!

ಬರಗಾಷ್ಠಿಗೆ ಪುರಿ-ಕಾರ-ಬೋಂಡಾ
ಉರಿವ ಬೆಂಕಿಗೆ ಕೊತ-ಕೊತ ಬೇಯುವ ಮಾಂಸ
ಕುಡಿಯಲು ಮಟನ್ ಸೂಪು, ಸಾರಿಗೆ ಕಡುಬು
ಯಾರಿಗುಂಟು ಯಾರಿಗಿಲ್ಲ ಗಡದ್ದಾದ ಊಟ
ಮತ್ತೇ; ಅಪ್ಪ-ಅವ್ವನ ಮಗ್ಗುಲಲ್ಲೇ ಕಥೆಯ ಪಾಠ

ಅಪ್ಪನ ಸಮಾಧಿಯ ಮೇಲೆ
ಬೆಳೆದ ಮರ-ಗಿಡ, ಹುಲ್ಲು
ಆಗಾಗ ತಂಪಾದ ಗಾಳಿಯ ಸೊಲ್ಲು
ಅಪ್ಪ ಮಣ್ಣಾಗಿ, ಮರವಾಗಿ, ಫಲವಾಗಿ ಬಾಗಲು
ಅದೆಷ್ಟು ನೋವು ತಿಂದನೋ ಅನೂಹ್ಯ
ಆದರೆ, ಈಗಲೂ ನೀಡುತ್ತಿದ್ದಾನೆ ಅನ್ನ!

ದಶಕಗಳ ಹಿಂದೆ ಅಪ್ಪನ ಒಡನಾಟ, ನಗುವಿತ್ತು
ಈಗ; ಅಪ್ಪ ಹಸಿ-ಹಸಿಯಾದ ನೆನಪಷ್ಟೇ..,
ಅವ್ವ; ನೆನಪನ್ನು ಮೆಲುಕು ಹಾಕುತ್ತಾಳೆ ಅಷ್ಟೂ-ಇಷ್ಟು
ನಾನು ಅಪ್ಪ-ಅಮ್ಮನನ್ನು ತುಂಬಾ ಪ್ರೀತಿಸುತ್ತೇನೆ
ಅದು ಭೂಮಿ ತೂಕದಷ್ಟು! ಮುಂದೆಯೂ
ಈ ಭೂಮಿಯ ನಂತರವೂ!!

# ನಳಂದಾ-ವಿಶ್ವವಿದ್ಯಾಲಯವನ್ನು ಭಕ್ತಿಯಾರ್ ಖಿಲ್ಜಿ ಏಕೆ ನಾಶಪಡಿಸಿದನು???

ಒಮ್ಮೆ ಟರ್ಕಿಯ ಸೇನಾ ಕಮಾಂಡರ್ ಬಖ್ತಿಯಾರ್ ಖಿಲ್ಜಿ ತೀವ್ರ ಅಸ್ವಸ್ಥರಾದನು . ಯಾವ ವೈದ್ಯರಿಗೂ ರೋಗವನ್ನು ಕಂಡುಹಿಡಿಯಲಾಗಲಿಲ್ಲ. ಖಿಲ್ಜಿ ದಿನದಿಂದ ದಿನಕ್ಕೆ ಬಲಹೀನನಾಗಿ ಹಾಸಿಗೆ ಹಿಡಿದ. ತನ್ನ ಕೊನೆಯ ದಿನಗಳು ಇಲ್ಲಿವೆ ಎಂದುಕೊಂಡನು.

ಒಂದು ದಿನ ಒಬ್ಬ ಮುದುಕ ಅವನನ್ನು ಭೇಟಿಯಾಗಲು ಬಂದನು. ದೂರದ ಭಾರತದ ಮಗಧ ಸಾಮ್ರಾಜ್ಯದಲ್ಲಿರುವ ನಳಂದ ಕಾಲೇಜಿನ ಜ್ಞಾನವುಳ್ಳ ಶೀಲಭದ್ರುನನ್ನು ಒಮ್ಮೆ ತೋರಿಸಲು ಸೂಚಿಸಿದನು, ಅವನು ನಿನ್ನನ್ನು ಸರಿಪಡಿಸುತ್ತಾನೆ. ಖಿಲ್ಜಿ ಸಿದ್ಧವಾಗಿಲ್ಲ. ನಾನು ಸತ್ತರೂ ನಾಸ್ತಿಕನಿಂದ ಔಷಧಿ ತೆಗೆದುಕೊಳ್ಳಲಾರೆ ಎಂದನು!! ಆದರೆ ಹೆಂಡತಿ ಮಕ್ಕಳ ಒತ್ತಾಯಕ್ಕೆ ಮಣಿದು ನಲಂದದ ಶೀಲಭದ್ರುಜಿ ಅವರಿಂದ ಚಿಕಿತ್ಸೆ ಪಡೆಯಲು ಒಪ್ಪಿದನು.



ಶೀಲಭದ್ರುಜೀ ಟರ್ಕಿಗೆ ಬಂದರು. ಖಿಲ್ಜಿಯು ಅವರಿಗೆ, ದೂರದಿಂದ ನೋಡು, ನನ್ನನ್ನು ಮುಟ್ಟಬೇಡ ಏಕೆಂದರೆ ನೀನು ನಾಸ್ತಿಕ ಮತ್ತು ನಾನು ನಿನ್ನಿಂದ ಔಷಧಿ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದನು. ಶೀಲಭದ್ರುಜೀ ಅವರ ಮುಖವನ್ನು ಒಮ್ಮೆ ನೋಡಿದರು, ಅವನ ದೇಹವನ್ನು ನೋಡಿದರು, ಕಫದಿಂದ ತುಂಬಿದ ಮಡಕೆಯನ್ನು ನೋಡಿದರು, ಉಸಿರಾಟ ಏರಿಳಿತಗಳ ಮತ್ತು ತಗ್ಗುಗಳನ್ನು ಅಧ್ಯಯನ ಮಾಡಿದರು ಮತ್ತು ಹೊರಗೆ ಹೋದರು.

ನಂತರ ಹಿಂತಿರುಗಿ ಕೇಳಿದರು, ನೀವು ಕುರಾನ್ ಓದುತ್ತೀರಾ? ಖಿಲ್ಜಿ ಹೇಳಿದನು ಹಗಲು ರಾತ್ರಿ ಓದುತ್ತೇನೆ! ಪುಟಗಳು ಹೇಗೆ ತಿರುಗುತ್ತವೆ? ಬೆರಳುಗಳಿಂದ ನಾಲಿಗೆಯನ್ನು ಸ್ಪರ್ಶಿಸುವುದು, ಹಾಳೆ ತಿರುಗಿಸುವುದು ಎಂದನು! ಶೀಲಭದ್ರುಜೀ ಖಿಲ್ಜಿಗೆ ತನ್ನಲ್ಲಿದ್ದ ಖುರಾನ್ ಅನ್ನು ಪ್ರಸ್ತುತಪಡಿಸಿದರು ಮತ್ತು ಇಂದಿನಿಂದ ನೀವು ಅದನ್ನು ಓದಬೇಕು ಎಂದು ಹೇಳಿದರು ಮತ್ತು ಶಿಲಭದ್ರುಜಿ ಭಾರತಕ್ಕೆ ಮರಳಿದರು.

ಮುಂದೆ ಒಂದು ದಿನದಲ್ಲಿ ಖಿಲ್ಜಿಯ ಆರೋಗ್ಯದಲ್ಲಿ ಬದಲಾವಣೆ ಕಂಡಿತು ಮತ್ತು ಒಂದು ವಾರದಲ್ಲಿ ಅವರು ಚೇತರಿಸಿಕೊಂಡನು. ವಾಸ್ತವವಾಗಿ, ಶೀಲಭದ್ರುಜೀಯವರು ಖುರಾನ್‌ನ ಪುಟಗಳ ಮೇಲೆ ಔಷಧವನ್ನು ಹೇರಿದ್ದರು, ಅದನ್ನು ಓದುವಾಗ ಬೆರಳುಗಳಿಂದ ನಾಲಿಗೆಗೆ ಕಳುಹಿಸುವ ವಿಶಿಷ್ಟ ವಿಧಾನವನ್ನು ಅಳವಡಿಸಿಕೊಂಡರು.

ಖಿಲ್ಜಿ ಆಶ್ಚರ್ಯಚಕಿತನಾದನು ಆದರೆ ಇನ್ನೂ ಹೆಚ್ಚಿನ ಅಸೂಯೆಯಿಂದ ಸಂಕಟಪಡಹತ್ತಿದನು, ಒಬ್ಬ ಕಾಫೀರನು ನನ್ನಂಥ ದೀನನಿಗಿಂತ ಹೇಗೆ ಹೆಚ್ಚು ಸಮರ್ಥನಾದನು? ಅತ್ಯಂತ ಕ್ರೋಧಭರಿತನಾದನು.

ಮುಂದಿನ ವರ್ಷ 1192 ರಲ್ಲಿ ಮೊಹಮ್ಮದ್ ಗೋರಿ ಅವರು ಸೈನ್ಯವನ್ನು ಸಿದ್ಧಪಡಿಸಿದರು ಮತ್ತು ನಲಂದಾ ಕಾಲೇಜು ಮಗಧ್ ಪ್ರದೇಶವನ್ನು ತಲುಪಿದರು. ಇಡೀ ಪ್ರಪಂಚದ ಜ್ಞಾನ ಮತ್ತು ವಿಜ್ಞಾನದ ಅತಿದೊಡ್ಡ ಕೇಂದ್ರ. ದೊಡ್ಡ ಕ್ಯಾಂಪಸ್‌ನಲ್ಲಿ 10000 ವಿದ್ಯಾರ್ಥಿಗಳು ಮತ್ತು 1000 ಶಿಕ್ಷಕರು ವಾಸಿಸುತ್ತಿದ್ದರು. ಅಲ್ಲಿ ಮೂರು ಅಂತಸ್ತಿನ ಕಟ್ಟಡವು ಒಂದು ಮಿಲಿಯನ್ ಪುಸ್ತಕಗಳು, ಹಸ್ತಪ್ರತಿಗಳು ಮತ್ತು ಪುಸ್ತಕಗಳೊಂದಿಗೆ ಬೃಹತ್ ಗ್ರಂಥಾಲಯವನ್ನು ಹೊಂದಿತ್ತು. ಖಿಲ್ಜಿ ಅಲ್ಲಿಗೆ ತಲುಪಿದಾಗ, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಅವನನ್ನು ಸ್ವಾಗತಿಸಲು ಹೊರಬಂದರು, ಏಕೆಂದರೆ ಅವರು ಕೃತಜ್ಞತೆಯನ್ನು ವ್ಯಕ್ತಪಡಿಸಲು ಬಂದಿದ್ದಾನೆ ಎಂದು ಅವರು ಭಾವಿಸಿದರು. ಖಿಲ್ಜಿ ಅವರನ್ನು ನೋಡಿ ಮುಗುಳ್ನಕ್ಕು ಅಲ್ಲಿಯ ಪ್ರಧಾನ ಸನ್ಯಾಸಿ ಗುರುಶ್ರೇಷ್ಠರ ಕುತ್ತಿಗೆಯನ್ನು ಕತ್ತಿಯಿಂದ ಕತ್ತರಿಸಿದನು (ಏಕೆಂದರೆ ಅವನು ಎಲ್ಲಾ ಸಿದ್ಧತೆಗಳೊಂದಿಗೆ ಬಂದನು). ಅದಸ್ಟೇ ಅಲ್ಲದೆ ಅಲ್ಲಿ ಓದುತ್ತಿದ್ದ ಸಾವಿರಾರು ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಕ್ಯಾರೆಟ್

ಮೂಲಂಗಿಯಂತೆ ಕತ್ತರಿಸಲಾಯಿತು (ಏಕೆಂದರೆ ಅವರೆಲ್ಲರೂ ಹಠಾತ್ ದಾಳಿಯ ಬಗ್ಗೆ ಅಜ್ಞಾನಿಗಳು). ಖಿಲ್ಜಿ ಮತ್ತೆ ಜ್ಞಾನ ವಿಜ್ಞಾನದ ಕೇಂದ್ರ ಗ್ರಂಥಾಲಯಕ್ಕೆ ಬೆಂಕಿ ಹಚ್ಚಿದ. ಮೂರು ತಿಂಗಳ ಕಾಲ ಪುಸ್ತಕಗಳು ಉರಿಯುತ್ತಲೇ ಇದ್ದವು ಎಂದು ಹೇಳಲಾಗುತ್ತದೆ.

